ಸಂಪುಟ 01 | ಸಂಚಿಕೆ 08 | ಭಾನುವಾರ 23 ನವೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) Fibonacci Day ಗಣಿತ, ಕಲಾ ಮತ್ತು ಸಜೀವ ಪ್ರಕೃತಿಯಲ್ಲಿ ಕಾಣುವ ಫಿಬೊನಾಚಿ ಸರಣಿಯನ್ನು ಸ್ಮರಿಸುವ ದಿನ

## ಸುಭಾಷಿತ

ಕಾಲ ಕೆಳಗೆ ಇರುವ ಧೂಳನ್ನು ಕೇವಲವಾಗಿ ನೋಡಬೇಡಿ. ಕಣ್ಣಲ್ಲಿ ಬಿದ್ದಾಗಲೇ ಗೊತ್ತಾಗುವುದು ಧೂಳಿನ ಬೆಲೆ... ಹಾಗೆಯೇ ಯಾರನ್ನೂ ಕೇವಲವಾಗಿ ಕೀಳಾಗಿ ನೋಡಬೇಡಿ.ಎಲ್ಲರಿಗೂ ಒಂದು ಗೌರವ ಬೆಲೆ ಇದ್ದೇ ಇರುತ್ತದೆ. ಅದು ಗೊತ್ತಾಗುವುದು ಸಮಯ ಬಂದಾಗಲೇ...

–ಡಾ. ಎ.ಪಿ.ಜೆ ಅಬ್ದುಲ್ ಕಲಾಂ

## ಬೀದಿ ನಾಯಿಗಳ ನಿಯಂತ್ರಣಕ್ಕೆ ಸೂಚನೆ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ನೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಸರ್ಕಾರಿ ಇಲಾಖೆ ಹಾಗೂ ಖಾಸಗಿ ಸಂಸ್ಥೆಗಳು ಸಹಕರಿಸಬೇಕು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಜಸ್‌ಪಾಲ್ ಸಿಂಗ್ ತಿಳಿಸಿದ್ದಾರೆ.**



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು ಸರ್ಕಾರಿ ಮತ್ತು ಖಾಸಗಿ, ಶಾಲಾ, ಕಾಲೇಜು, ಆಸ್ಪತ್ರೆ, ಬಸ್‌ನಿಲ್ದಾಣ, ಖಾಸಗಿ ವಾಣಿಜ್ಯ ಸಂಕೀರ್ಣಗಳು ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಬೀದಿ ನಾಯಿಗಳ ನಿಯಂತ್ರಣ–ಕ್ಕೆ ಸಂಬಂಧಪಟ್ಟ ಇಲಾಖೆ, ಸಂಸ್ಥೆಗಳು ಕಾಳಜಿವಹಿಸಬೇಕು, ಈಕುರಿತು ಸ್ಥಳಿಯ ಆಡಳೀತಕ್ಕೆ ಸೂಕ್ತ ಮಾಹಿತಿ ಒದಗಿಸಲು ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕು, ಬೀದಿ ನಾಯಿಗಳ ಹಾವಳಿ ತಡೆಯುವಲ್ಲಿ ಕಾಳಜಿ ತೋರದ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ವಿರುದ್ಧ ನ್ಯಾಯಾಲಯದ ಅದೇಶದಂತೆ ಕ್ರಮ ಕೈಗೊಳ್ಳಲಾಗುದು ಎಂದು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಿದ್ರಾಮಣ್ಣ ತಾವು ನಡೆದು ಬಂದ ದಾರಿ ಮರೆತ್ತಿದ್ದಾರೆ : ನಿಖಿಲ್ ಕುಮಾರಸ್ವಾಮಿ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯದ ಮುಖ್ಯಮಂತ್ರಿ ಸಿದ್ರಾಮಣ್ಣ ಅವರು ನಡೆದು ಬಂದ ದಾರಿ ಮರೆತಿದ್ದಾರೆ. ಇದು ಅವರಿಗೆ ಮಾಡಿಕೊಳ್ಳುತ್ತಿರುವ ಅನ್ಯಾಯ. ನೀವು ಹಿರಿಯರು, ಅನುಭವಿಗಳು ಗೌರವಿಸುತ್ತೇವೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಸೂಕ್ಷ್ಮವಾಗಿ ಕುಟುಕಿದರು.**

ಜೆಡಿಎಸ್ 25 ವರ್ಷಗಳ ರಜ–ತ ಮಹೋತ್ಸವ ಸಂಭ್ರಮಾಚರಣೆ ಅಂಗವಾಗಿ ಪಕ್ಷದ ರಾಜ್ಯ ಕಛೇರಿ ಜೆ.ಪಿ. ಭವನದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಮಹಾ ಅಧಿವೇಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಜನತಾಪರಿವಾರದಲ್ಲಿ ಅಂದು ದೊಡ್ಡ ದೊಡ್ಡ ನಾಯಕರಿದ್ದರು. ಅವರೆಲ್ಲರನ್ನು ಬಿಟ್ಟು ಸಿದ್ದರಾಮಯ್ಯ ಅವರನ್ನು ಹಣಕಾಸು ಮಂತ್ರಿ ಮಾಡಿ ಬಜೆಟ್ ಮಂಡನೆ ಮಾಡಿವುದಕ್ಕೆ ಅವಕಾಶ ಮಾಡಿಕೊಟ್ಟಿದ್ದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು. ಇದು ಪಕ್ಷ ಮಾಡಿದ್ದು. ಅವರನ್ನು ಉಪ ಮುಖ್ಯಮಂತ್ರಿಯ ಸ್ಥಾನಕ್ಕೆ



ಕರೆದುಕೊಂಡು ಹೋಗಿದ್ದು ಇದೇ ದೇವೇಗೌಡರು.

ಈಗ ನಡೆದು ಬಂದ ದಾರಿ ಮರೆತಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಸಾಮಾಜಿಕ ನ್ಯಾಯ ಮತ್ತು ಸಾಮಾಜಿ–ಕ ಬದ್ಧತೆ ದೃಷ್ಟಿಯಲ್ಲಿ, ಎಲ್ಲರನ್ನೂ ಸಮಾನತೆ ದೃಷ್ಟಿಯಿಂದ ಬೆಳೆಸುವ ಗುಣ ಕರ್ನಾಟಕದಲ್ಲಿ ಯಾರಿಗಾದರೂ ಇದ್ದರೆ ಅದು ದೇವೇಗೌಡ–ರಿಗೆ. ಈಗ ಸಿದ್ರಾಮಣ್ಣ ನಮ್ಮ ಪಕ್ಷದ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಅವರು ಬೆಳೆದು ಬಂದ ದಾರಿ ಮರೆತಿದ್ದಾರೆ. ಅವರಿಗೆ ದೇವರು ಒಳ್ಳೇದು ಮಾಡಲಿ ಎಂದು ಅವರು ಹೇಳಿದರು. ದೇವೇಗೌಡರು ಈ ವಯಸ್ಸಿನಲ್ಲೂ ಅವರ ಜೀವನವನ್ನು ಸಾರ್ವಜನಿಕ ಸೇವೆಗೆ ಮೂಡುಪಾಗಿಟಿದ್ದಾರೆ. ದೇಶದ ಇತಿಹಾಸದಲ್ಲೇ ಇಂಥ ವ್ಯಕ್ತಿತ್ವವನ್ನು ನಾವು ಹಿಂದೆ ನೋಡಿಲ್ಲ, ಮುಂದೆ ನೋಡಲ್ಲ. ದೇವೇಗೌಡರು ನಮ್ಮಂತ ಯುವಕರಿಗೆ ಸ್ಫೂರ್ತಿ. ಎಲ್ಲರೂ ಪಕ್ಷತೀತವಾಗಿ ಅವರನ್ನು ಆರಾಧಿಸುತ್ತಾರೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಣ್ಣ ಮಗನಾಗಿ ಹುಟ್ಟಿರುವುದೇ ನನ್ನ ಸೌಭಾಗ್ಯ ಎಂದು ನಿಖಿಲ್ ಭಾವುಕಾರಾದರು.

ಈ ಕಾರ್ಯಕ್ರಮವನ್ನು ಎಲ್ಲಿ ಬೇಕಾದರೂ ಮಾಡಬಹುದಿತ್ತು. ಆದರೆ, ಜೆ.ಪಿ ಭವನ ನಮಗೆಲ್ಲಾ ದೇವಾಲಯವಿದ್ದಂತೆ. ಹಾಗಾಗಿ ರಜತ ಮಹೋತ್ಸವ ಆಚರಣೆ ಮಾಡಲು ಕುಮಾರಣ್ಣ ಅವರು ಹೇಳಿದರು. ರೈತರು ಈ ರಾಜ್ಯದಲ್ಲಿ ಉಳಿಯಬೇಕಾದರೆ ಕುಮಾರಣ್ಣ ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕು ಎಂದು ಅವರು ಒತ್ತಿ ಹೇಳಿದರು. ಎರಡು ರಾಷ್ಟೀಯ ಪಕ್ಷದಲ್ಲೂ ದುರ್ಬಿನ್ ಹಾಕಿ ಹುಡುಕಿದರೂ ಜೆಡಿ

4ನೇ ಪುಟಕ್ಕೆ

## ರಾಸಾಯನಿಕ ಪ್ರಭಾವದಿಂದ ವಿದ್ಯಾರ್ಥಿಗಳು ಅಸ್ವಸ್ತರಾದ ಹಿನ್ನೆಲೆಯಲ್ಲಿ ತಹಸೀಲ್ದಾರರಿಂದ ಪರಿಶೀಲನೆ



❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಆರ್.ಜಿ.ಕ್ಯಾಂಪ್ ರಸ್ತೆಯಲ್ಲಿ ಬರುವ ಶಿರಡಿ ಸಾಯಿಬಾಬಾ ದೇವಸ್ಥಾನದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿನ ಕೃಷಿ ಜಮೀನಿನಲ್ಲಿ **ರೈತರು ವಿವಿಧ ಬೆಳೆಗಳಿಗೆ ಸಿಂಪರಣೆ ಮಾಡಿದ ಕೀಟನಾಶಕದ ಅಂಶಗಳು ಶುಕ್ರವಾರ ಈ ಭಾಗದ ಗಾಂಧಿ ಸ್ಮಾರಕ ಶಿಕ್ಷಣ ಸಂಸ್ಥೆ, ಶ್ರೀ. ವೆಂಕಟೇಶ್ವರ ಶಿಕ್ಷಣ ಸಂಸ್ಥೆ, ಆರ್.ವಿ.ಎಸ್.ಬ್ಲೋಸಂ ಶಿಕ್ಷಣ ಸಂಸ್ಥೆಯಲ್ಲಿ ಅಭ್ಯಾಸ ಮಾಡುತ್ತಿರುವ ಕೆಲವು ವಿದ್ಯಾರ್ಥಿಗಳಲ್ಲಿ ಗಂಟಲು ಉರಿ ಹಾಗೂ ವಾಂತಿಯಂತಹ ಲಕ್ಷಣಗಳು ಕಂಡು ಬಂದಿದ್ದರಿಂದ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯವರು ಶಾಲೆಗೆ ರಜೆ ಘೋಷಣೆ ಮಾಡಿದ್ದರು ಈ ಹಿನ್ನೆಲೆಯಲ್ಲಿ ಶನಿವಾರ ತಾ.ಆರೋಗ್ಯಧಿಕಾರಿ ಡಾ.ಶರಣಬಸವರಾಜ, ಪುರಸಭೆ ಆರೋಗ್ಯ ನಿರೀಕ್ಷಕರಾದ ಮಹೇಶಕುಮಾರ, ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯವರು ತಹಸೀಲ್ದಾರ್ ಭಿಮರಾಯ ಬಿ.ರಾಮಸಮುದ್ರ ಭೇಟಿ ನೀಡಿ ಪರಿಶೀಲಿಸಿದರು.**

ನಂತರ ತಹಸೀಲ್ದಾರ್ ಭಿಮರಾಯ ಬಿ.ರಾಮಸಮುದ್ರ ಮಾತನಾಡಿ ರಾಸಾಯನಿಕ ಪ್ರಭಾವದಿಂದಾಗಿ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ಪ್ರಭಾವ ವಾಗಿತ್ತು ಆದರೆ ಇಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಿ ರಾಸಾಯನಿಕ ಅಂಶ ಇಂದು ಕಂಡು ಬಂದಿಲ್ಲ ಎಂದು ತಿಳಿಸಿರುವುದರಿಂದ ಈ ಮೂರು ಶಾಲೆಗಳಿಗೆ ಮಕ್ಕಳ ಪ್ರವೇಶಕ್ಕೆ ಅನುಮತಿ ನೀಡಲಾಗಿದ್ದೆ ಹಾಗೂ ಪಕ್ಕದಲ್ಲಿನ ಬಾಲಕಿಯರ ವಸತಿ ನಿಲಯದಲ್ಲಿನ ಮಕ್ಕಳ ಆರೋಗ್ಯದ ಬಗ್ಗೆ ಕೂಡ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

## ತಾಲೂಕಾ ಸೌಟ್ಸ್ ಗೈಡ್ಸ್ ಸಮಾವೇಶ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸ್ಕೌಟ್ ಗೈಡ್ ತರಬೇತಿ ಸಹಕಾರಿ ಎಂದು ಜಿಲ್ಲಾ ಸಹಾಯಕ ಆಯುಕ್ತ ಸ್ಕೌಟ್ ಮಲ್ಲನಗೌಡ ನುಡಿದರು. ಅವರು ಮಾನ್ವಿ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ತಾಲೂಕಾ ಮಟ್ಟದ ಸ್ಕೌಟ್ ಗೈಡ್ ಸಮಾವೇಶ ಹಾಗೂ ಮಾಹಿತಿ ಶಿಬಿರ ಉದ್ಘಾಟಿಸಿ ಮಾತನಾಡಿದರು.ಸಭೆಯ ಅಧ್ಯಕ್ಷತೆಯನ್ನು ಬಲರಾಮ ಕೃಷ್ಣ ಅವರು ವಹಿಸಿದ್ದರು.**

ವೇದಿಕೆ ಮೇಲೆ ಕಾರ್ಯದರ್ಶಿ ರಾಮಲಿಂಗಪ್ಪ, ಸಲೀಂ, ಚಾಂದ್ ಪಾಷಾ ಅರುಣ್ ಚಂದ,ಜಿಲ್ಲಾ ಸ್ಕೌಟ್ ಆಯುಕ್ತ ಬಸವರಾಜ್, ಗದಗಿನ ,ಉಪಸ್ಥಿತ–



ರಿದ್ದರು.ಪ್ರಾಸ್ತಾವಿಕ ನುಡಿಯನ್ನು ಜಿಲ್ಲಾ ಸಂಘಟಕ್ಕ ಅಂಬಣ್ಣ ನಾಯಕ್ ಮ್ಯಾಕಲ್ ಮಾತನಾಡಿದರು.ಮಾನ್ವಿ ಪಬ್ಲಿಕ್ ಶಾಲೆಯ ಕಾರ್ಯದರ್ಶಿ ಸೈಯದ್ ಮುಜಾತನ ಖಾದ್ರಿ, ಸಿರವಾರದ ವೆಂಕಟ ರೆಡ್ಡಿ ಬಲಕಲ್,ನಾಗರತ್ನ ದೇಸಾಯಿ,.ಶಿಬಿರದ ನಾಯಕರಾಗಿ ಚಂದ್ರಶೇಖರ್, ನಾಯಕಿ ಆಗಿ ರಜನಿ,ಪ–ರಿಮಳ,ಸೌಮ್ಯ ಕಾರ್ಯ ನಿರ್ವಹಿಸಿದರು.

## ರಾಷ್ಟ್ರೀಯ ನವಜಾತ ಶಿಶು ಆರೈಕೆ ಸಪ್ತಾಹ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸೂರು: ನ 22 – ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ರಾಷ್ಟ್ರೀಯ ನವಜಾತ ಶಿಶು ಆರೈಕೆ ಸಪ್ತಾಹ ಕಾರ್ಯಕ್ರಮ ಜರುಗಿತು . ಸರ್ಕಾರಿ ಆಸ್ಪತ್ರೆ ಮಕ್ಕಳ ತಜ್ಞ,ಡಾ. ಸಂಜೀವ ರೆಡ್ಡಿ ಮಾತನಾಡಿ ನವಜಾತ ಶಿಶು ಆರೈಕೆಯಲ್ಲಿ ಎದೆ ಹಾಲು ಉಣಿಸುವಿಕೆ ಮತ್ತು ಕಾಂಗರು ಮದರ್ ಕೇರ್ ನಿಂದ ಶಿಶುವಿನ ಮರಣ ಪ್ರಮಾಣ ತಡೆಗಟ್ಟುವುದು ಹಾಗೂ ಆರೋಗ್ಯವಂತ ಮಗು ಬೆಳವಣಿಗೆಗೆ ಸಹಕಾರಿಯಾಗಿದೆ.**

ತಾಯಂದಿರು ಗರ್ಭಿಣಿಯ–ರಿಗೆ ಹುಟ್ಟಿದ ಮಕ್ಕಳ ಸಮಗ್ರ ಆರೈಕೆ ಮಾಡುವುದು ಅಗತ್ಯವೆಂದು ಹೇಳಿದರು. ಆರೋಗ್ಯ ಶಿಕ್ಷಣಾಧಿಕಾರಿ ಪ್ರಾಣೇಶ್ ಜೋಶಿ ಒಂದು ವರ್ಷದೊಳಗಿನ ಮಗುವಿಗೆ ಹಾಕಬೇಕಾದ ಲಸಿಕೆಗಳ ಮಹತ್ವದ ಕು–



ರಿತು ಜಾಗೃತಿ ಮೂಡಿಸಿದರು ಬಳಿಕ ಮಗುವನ್ನು ಬೆಚ್ಚಗಿಡುವ ಕಾಂಗರು ಮದರ್ ಕೇರ್ ವಿಧಾನಗಳನ್ನು ಪ್ರತ್ಯಕ್ಷಿಕೆ ಮೂಲಕ ಶುಶ್ರೂಷಕ ಅಧಿಕಾರಿ ಮರ್ಲಿನಾ, ಪ್ರೇಮ, ಹನುಮಂತರಾಯ ವಿವರಿಸಿದರು. ಕಾರ್ಯಕ್ರಮ ವ್ಯವಸ್ಥಾಪಕಿ ಶಿವಲೀಲಾ ಮೇಟಿ ,ಅಕೌಂಟ್ ಮ್ಯಾನೇಜರ್ ಪದ್ಮಾವತಿ, ಆಪ್ತ ಸಮಾಲೋಚಗಿ ರೋಸ್ ಮೇರಿ ಸೇರಿದಂತೆ ಆಶಾ ಕಾರಸೇರಿದಂತೆ ಭಾಗವಹಿಸಿದ್ದರು.

# ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸುವೆ: ಮನೋಜ್ ಕುಮಾರ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲ್ಲೂಕಿನ ಕುರ್ಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.ಕಾರ್ಯಾಲಯದಲ್ಲಿ ಶ್ರೀ ಮನೋಜ್ ಕುಮಾರ ಚಿಕ್ಕಗೌಡರ ಇವರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ವಿಶ್ವಾನಾಥ ಪಾಟೀಲ್ ಅಧ್ಯಕ್ಷರು, ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ರಾಯಚೂರು ಮತ್ತು ಶ್ರೀ ಸಚಿನ್, ಜಿಲ್ಲಾ ವ್ಯವಸ್ಥಾಪಕರು, ಇಫ್ಕೊ ನವದೆಹಲಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.**

ಸಭೆಯ ಉದ್ದೇಶಿಸಿ ಸಂಘದ ಅಧ್ಯಕ್ಷರಾದ ಶ್ರೀ ಮನೋಜ್ ಕುಮಾರ ಮಾತನಾಡಿ ನಮ್ಮ ಸಂಘದಲ್ಲಿ 8 ಜನ ರೈತ ಸದಸ್ಯರು ಮೃತ ಹೊಂದಿದ್ದು, ಅವರ ಸಾಲ ರೂ. 3.40 ಲಕ್ಷಗಳು ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿಯಮಿತ ರಾಯಚೂರು ಇವರು ಕೊಡುವ ಮರಣೋತ್ತರ ಪರಿಹಾರ ನಿಧಿ ಅಡಿಯಲ್ಲಿ ಲಾಭಪಡೆದಿದ್ದಾರೆ. ಸದರಿ ಪರಿಹಾರ ಪಡೆದ ನಮ್ಮ ಸಂಘದ ರೈತ ಸದಸ್ಯರ ಪರವಾಗಿ ನಾವುಗಳು ಶ್ರೀ ವಿಶ್ವಾನಾಥ ಪಾಟೀಲ್ ಅಧ್ಯಕ್ಷರು ಆರ್.ಕೆ.ಡಿ.ಡಿ.ಸಿ ಬ್ಯಾಂಕ್ ಇವರನ್ನು ಸನ್ಮಾನಿಸಿದರು. ಅದರಂತೆ ನಮ್ಮ ಸಂಘವು ಪ್ರಸಕ್ತ ಸಾಲಿನಲ್ಲಿ ಒಟ್ಟು 2.21 ಕೋಟಿ ಮೊತ್ತದ ಗೊಬ್ಬರ ಮಾರಾಟ ಮಾಡಿದ್ದು, ಈ ಪೈಕಿ 21 ಲಕ್ಷ ರೂ. ಗಳ ದ್ರವ ರೂಪದ ಗೊಬ್ಬರ ಮಾರಾಟ ಮಾಡಿದ್ದರಿಂದ ಜಿಲ್ಲಾ ವ್ಯವಸ್ಥಾಪಕರು ಇಫ್ಕೊ ನವದೆಹಲಿ ಇವರನ್ನು ಸನ್ಮಾನಿಸಿದರು.

ನಂತರದಲ್ಲಿ ಮಾತನಾಡಿದ ಅವರು ಆರ್. ಕೆ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರು, ನಮ್ಮ ಬ್ಯಾಂಕ್ ರೈತರ ಪರವಾಗಿದ್ದು, ರೈತರ ಏಳಿಗೆಗಾಗಿ ಶ್ರಮಿಸಲಾಗುತ್ತಿದೆ. ಇತ್ತಿಚೀನ ದಿನಗಳಲ್ಲಿ ಸಾಲ ಪಡೆದ ರೈತರು ತಮ್ಮ ಆರ್ಥಿಕ ದೌರ್ಬಲ್ಯದಿಂದ ಸರಿಯಾದ ಸಮಯಕ್ಕೆ ಸಾಲ ತೀರಿಸಲು ಪರದಾಡುತ್ತಿದ್ದಾರೆ. ಕುಟುಂಬ ನಿರ್ವಹಣೆ ಮಾಡುವ ರೈತ ಆಕಸ್ಮಿಕ ಮರಣ ಹೊಂದಿದರೆ, ಅವರ ಕುಟುಂಬ ಆರ್ಥಿಕವಾಗಿ ದುರ್ಬಲಗೊಳ್ಳುವುದನ್ನು ಮನಗಂಡು ಈ ಯೋಜನೆಯಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆಯು ರೈತ ಕುಟುಂಬಕ್ಕೆ ಆರ್ಥಿಕವಾಗಿ ಸಾಂತ್ವಾನ ನೀಡಿದಂತಾಗುತ್ತದೆ ಎಂದು ತಿಳಿಸಿದರು, ಅದರಂತೆಯೆ ಕುರ್ಡಿ ಪ್ರಾಥಮಿಕ ಕೃಷಿ ಸಂಘವು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಆಡಳಿತ ಮಂಡಳಿ ಮತ್ತು ಸಿಬ್ಬಂಧಿಗಳ ಕಾರ್ಯವನ್ನು ಶ್ಲಾಘಿಸಿದರು.

ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಸಚಿನ್ ಇಫ್ಕೋ ನವದೆಹಲಿ ಇವರು ಮಾತನಾಡಿ ಕೇಂದ್ರ ಸರ್ಕಾರವು ಯೂರಿಯಾ ಗೊಬ್ಬರದ ಬಳಕೆಯನ್ನು ಕಡಿಮೆ ಮಾಡಲು ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ನಮ್ಮ ರೈತರು ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಯೂರಿಯಾ ಗೊಬ್ಬರವನ್ನು



ಬಳಸುತ್ತಿದ್ದಾರೆ. ಯೂರಿಯಾ ಗೊಬ್ಬರದ ಬಳಕೆಯನ್ನು ಮಿತಿಯಾಗಿಸಲು ನ್ಯಾನೋ ಯೂರಿಯಾ, ನ್ಯಾನೋ ಡಿ.ಎ.ಪಿ ದ್ರವ ರೂಪದ ಗೊಬ್ಬರಗಳನ್ನು ಕೇಂದ್ರ ಸರ್ಕಾರವು ಉತ್ತೇಜಿಸುತ್ತಿದೆ. ಹೀಗಾಗಿ ಕುರ್ಡಿ ಸಂಘವು ಸದರಿ ಸಾಲಿನಲ್ಲಿ ಒಟ್ಟು 21.00 ಲಕ್ಷ ರೂ.ಗಳ ದ್ರವ ರೂಪದ ಗೊಬ್ಬರ ಮಾರಾಟ ಮಾಡಿದ್ದು, ಜಿಲ್ಲೆಯಲ್ಲಿ ಮಾದರಿಯಾಗಿದೆ ಎಂದು ತಮ್ಮ ಅಭಿಪ್ರಾಯ ಪಟ್ಟರು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ಶ್ರೀ ಭೀಮಯ್ಯ ಇವರು ಮಾತನಾಡುತ್ತಾ, ರಾ.ಜಿ.ಕೆ.ಸ.ಬ್ಯಾಂಕ್ ಅಧ್ಯಕ್ಷರು ಅನುಷ್ಟಾನಗೊಳಿಸಿದ ಮರಣೋತ್ತರ ಪರಿಹಾರ ನಿಧಿ ಯೋಜನೆಯು ದುರ್ಬಲ ವರ್ಗದ ರೈತರಿಗೆ ಆರ್ಥಿಕ ಬಲ ನೀಡಿದಂತಾಗುತ್ತದೆ. ಇದು ರಾಜ್ಯದಲ್ಲಿ ರೈತರಿಗೆ ಮಾದರಿ ಯೋಜನೆ ಎಂದು ಅಭಿಪ್ರಾಯ ಪಟ್ಟರು. ಅದರಂತೆ ಮಾನ್ಯ ಅಧ್ಯಕ್ಷರು ಇವರ ಮಾರ್ಗದರ್ಶನದಲ್ಲಿ ಕೇಂದ್ರ ಸರ್ಕಾರದ ಒನ್ ನೇಷನ್ ಒನ್ ಸಾಫ್ಟವೇರ್ ಯೋಜನೆ ಅಡಿಯಲ್ಲಿ ನಮ್ಮ ಜಿಲ್ಲೆಯು ರಾಜ್ಯದಲ್ಲಿ 2 ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯ ಎಂದು ತಿಳಿಸಿದರು. ಅದರಂತೆಯ ಮಾನ್ಯ ಅಧ್ಯಕ್ಷರು ಇವರ ಮಾರ್ಗದರ್ಶನದಲ್ಲಿ ಯುವ ನಿರ್ದೇಶಕರುಗಳಿಗೆ, ಸಿಬ್ಬಂಧಿಗಳಿಗೆ ತರಬೇತಿ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡು ಉತ್ತೇಜಿಸುವರು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ, ಶ್ರೀ ಪ್ರವೀಣ ಕುಮಾರ ಮಾತನಾಡಿ ಆರ್. ಕೆ.ಡಿ.ಸಿ.ಸಿ ಬ್ಯಾಂಕ್ ನೀಡುವ ಬೆಳೆ ಸಾಲ ಇನ್ನು ಹೆಚ್ಚಿಗೆ ನೀಡಬೇಕೆಂದು ಕೋರಿಕೊಂಡರು.

ಸಭೆಯಲ್ಲಿ ಮುಖಂಡರಾದ ಶ್ರೀ ಜಬ್ಬರಸಾಬ ಮಾತನಾಡಿ ನಮ್ಮ ಗ್ರಾಮದಲ್ಲಿ ಜಾತಿ, ಧರ್ಮ ಬದಿಗಿಟ್ಟು ಸೌಹಾರ್ದಯುತವಾಗಿ ಗ್ರಾಮದ ಏಳಿಗೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು. ಅದರಂತೆ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ ರಮೇಶ ಇವರು ಮಾತನಾಡುತ್ತಾ ಒಂದು ಗ್ರಾಮವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರೆಯಬೇಕಾದರೆ ಗ್ರಾಮದಲ್ಲಿ ಗ್ರಾಮ ಪಂಚಾಯತ, ಸಹಕಾರ ಸಂಘ ಮತ್ತು ಶಾಲೆಗಳ ಮುಖ್ಯ ಪಾತ್ರ ವಹಿಸುತ್ತವೆ. ಈ ಮೂರು ಸಂಸ್ಥೆಗಳು ಗ್ರಾಮಕ್ಕೆ ಅತ್ಯಂತ ಹೆಚ್ಚಿನ ಕೊಡುಗೆಗಳು ನೀಡುತ್ತವೆ ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಮನೋಜ್ ಕುಮಾರ ಚಿಕ್ಕೆಗೌಡರ್, ಉಪಾಧ್ಯಕ್ಷರಾದ ಶ್ರೀ ಯಲ್ಲಪ್ಪ ಗಟ್ಟು ಉಪಾಧ್ಯಕ್ಷರು, ನಿರ್ದೇಶಕರಾದ ಶ್ರೀ ಹಾಜೀ ಖಾಜಾರಹಮತಖಾನ್, ಶ್ರೀ ಬಸವರಾಜ ಗಟ್ಟು, ಶ್ರೀ ಅಬ್ದುಲ್ ರಜಾಕ್, ಶ್ರೀ ನಾಗರಾಜ ಹೂಗಾರ, ಶ್ರೀ ಭೀಮಯ್ಯ ಕೊಂಬಿನ್, ಶ್ರೀ ಸಣ್ಣ ಕರೆಪ್ಪ ಹೊಳೆಮ್ಮನವರ, ಶ್ರೀ ಗೋಪಾಲ ಯಾದವ, ಶ್ರೀಮತಿ ಸಾಜೀದಾಬೇಗಂ, ಶ್ರೀಮತಿ ಈರಮ್ಮ ತಿಕ್ಕಯ್ಯನಾಯಕ, ಶ್ರೀಮತಿ ಈರಮ್ಮ ಪೋಲಪ್ಪನವರ, ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ರಾಯನಗೌಡ, ಶ್ರೀ ಎಲ್. ಬದರಿನಾರಾಯಣ, ಶ್ರೀ ನಾಗೇಶ ಬಜಾರ, ಮಾಜಿ ಉಪಾಧ್ಯಕ್ಷರಾದ ಶ್ರೀ ಹನೀಫ್ ಸಾಬ, ಗ್ರಾಮದ ಹಿರಿಯ ಮುಖಂಡರಾದ ಶ್ರೀ ಸೂಗಪ್ಪ ಸಾಹುಕಾರ, ಶ್ರೀ ವೆಂಕನಗೌಡ ಗೋರ್ಕಲ್, ಶ್ರೀ ಶಿವರಾಜಪ್ಪ ಪಾಟೀಲ್ ಸುಂಕೇಶ್ವರ ಮತ್ತು ಕುರ್ಡಿ, ಗೋರ್ಕಲ್, ಆರೋಲಿ, ಬ್ಯೆಲ್ ಮರ್ಚೆಡ್, ಸುಂಕೇಶ್ವರ ಗ್ರಾಮದ ಎಲ್ಲಾ ರೈತ ಬಾಂಧವ–ರಿಗೆ, ಅಂತಿಮವಾಗಿ ಸಭೆಯ ವಂದನಾರ್ಪಣೆಯನ್ನು ಸಂಘದ ಮುಖ್ಯಕಾರ್ಯನಿರ್ವಾಹಕರು ಶ್ರೀ ಇಕ್ಬಾಲ್ ಇವರು ವಂದಿಸಿದರು.

## ಸಾಹಿತ್ಯ ಸಿಂಚನ

ನಮ್ಮೀ ತಾತ ತಾತ
ಅಕ್ಕರೆ ಹುಕ್ಕಿಸು ಜ್ಞಾನದ ಮಾತಿನ
ಸರಳ ಸಜ್ಜನಿಕೆಯ ಮುತ್ಸದಿ ..
ಜನಾನುರಾಗಿ ನಮ್ಮಿ ತಾತಾ ವಿಶ್ವವಿಖ್ಯಾತ ...

ಸಾಧನೆಯ ಶಿಖರವೇರಿ ವೀರಮಿರ ಮಿಂಚುವ
ಏನ ವಿಶ್ವ ವಿಧಂ ,
ನಿತ್ಯಂ ಧೃತಂ.. ಎನ್ನುವ ಮಾತಿನ ಜಿಂಕಾರ
ನುಡಿಯ ನಮ್ಮೀ ತಾತ

ಜ್ಞಾನಯೋಗಿ, ಸದ್ಧರ್ಮ ಸಾಧಕ ಶಿಕ್ಷಣ ಯೋಗಿ,
ದೀನ ದಲಿತರ ಉದ್ಧಾರಕ, ಯತ್ರ ರಾಮನ್
ತತ್ರ ಅಯೋಧ್ಯ ಎನ್ನುವ ಮಾತಿನ ಪ್ರತಿರೂಪ
ನಮ್ಮೀ ತಾತ ಜನರುದ್ಧಾರಕ..
ಸಂಘರ್ಷದ ಬದುಕಲ್ಲಿ ಹೋರಾಟದ ಸಾಗರದಲ್ಲಿ
ಮಿಂದು ಜಯಿಸಿದ ಧೀಮಂತ ಹೋರಾಟಗಾರ
ನೀತಿವಂತ ಸಕಲ ಗುಣಗಳ ಸಂಪನ್ನ
ನಮ್ಮೀ ತಾತ ಸರ್ವಜನ ಸಂಜಾತ. ...
ವಿಜಯಪುರದ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ
ಸ್ವಾಮಿಜಿ ತಾತ

**ಅಮರೇಶ್ ಹೂಗಾರ್ ಶಿಕ್ಷಕರು**

# ಮಂಗಳಮುಖಿಯರ ಬದುಕಿನ ನೈಜ ಚಿತ್ರಣ 'ಶಿವಲೀಲಾ'-2026ರ ಜನವರಿಯಲ್ಲಿ ತೆರೆಗೆ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯೆಬ್ಬಿಸಲು, ಹೊಸ ಪ್ರತಿಭೆಗಳ ಸಂಗಮದೊಂದಿಗೆ ಸಿದ್ಧವಾಗಿರುವ 'ಶಿವಲೀಲಾ' ಚಲನಚಿತ್ರದ ಪ್ರಚಾರ ಕಾರ್ಯಕ್ರಮವು ಪಟ್ಟಣದ ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಅದ್ದೂರಿಯಾಗಿ ಜರುಗಿತು. ಚಿತ್ರತಂಡವು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಚಿತ್ರದ ವಿಶೇಷತೆಗಳನ್ನು ಹಂಚಿಕೊಂಡಿತು.**

ಈ ವೇಳೆ ಮಾತನಾಡಿದ ಚಿತ್ರದ ನಾಯಕ ನಟ, ಹೊಸ ಪ್ರತಿಭೆ ದಿವಾಕರ್, "ಚಿತ್ರರಂಗವು ಈಗ ಹೊಸ ಹಾದಿಯಲ್ಲಿ ಸಾಗುತ್ತಿದ್ದು, ಶಿವಲೀಲಾ ಚಿತ್ರವು ವಿಭಿನ್ನ ಆಲೋಚನೆಗಳೊಂದಿಗೆ ಮೂಡಿಬಂದಿದೆ. ಇದೊಂದು ಹೊಸ ಪ್ರಯತ್ನವಾಗಿದ್ದು, ಕಥೆಯು ತುಂಬಾ ಸುಂದರವಾಗಿ ರೂಪುಗೊಂಡಿದೆ. ಎಲ್ಲರೂ ನಮ್ಮ ತಂಡಕ್ಕೆ ಶುಭ ಹಾರೈಸಬೇಕು," ಎಂದು ಮನವಿ ಮಾಡಿದರು. ಮಂಗಳಮುಖಿಯರ ಬದುಕಿನ ಕನ್ನಡಿ: ಚಿತ್ರದ ಪ್ರಮುಖ ಪಾತ್ರಧಾರಿ ಹಾಗೂ ಮಾನ್ವಿ ಮೂಲದ ನಟಿ ದೀಪಜ್ಯೋತಿ ಅವರು ಮಾತನಾಡಿ,



"ಈ ಚಿತ್ರವು ಮುಖ್ಯವಾಗಿ ಮಂಗಳಮುಖಿಯರ ಜೀವನವನ್ನು ಆಧಾರವಾಗಿರಿಸಿಕೊಂಡಿದೆ.

ಸಮಾಜದಲ್ಲಿ ಮಂಗಳಮುಖಿಯರು ಎದುರಿಸುತ್ತಿರುವ ಸಂಕಷ್ಟಗಳು, ಅವರಿಗೆ ಸಿಗದ ಅವಕಾಶಗಳು ಮತ್ತು ಸಮಾಜ ಅವರನ್ನು ನೋಡುವ ದೃಷ್ಟಿಕೋನದ ಬಗ್ಗೆ ನೈಜವಾಗಿ ಚಿತ್ರಿಸಲಾಗಿದೆ," ಎಂದರು. ಮುಂದುವರೆದು ಮಾತನಾಡಿದ ಅವರು, "ನಾವು ಕೂಡ ಸಮಾಜದಲ್ಲಿ ಗುರುತಿಸಿಕೊಳ್ಳಲು ಹೋರಾಡುತ್ತಿದ್ದೇವೆ. ಜನರು ನಮ್ಮನ್ನು ಮನುಷ್ಯರಂತೆ ಕಾಣಬೇಕು ಮತ್ತು ನಮ್ಮ ಕೈ ಹಿಡಿಯಬೇಕು," ಎಂದು ಭಾವುಕರಾಗಿ ನುಡಿದರು.

ಉತ್ತರ ಕರ್ನಾಟಕದ ಪ್ರತಿಭೆಗಳಿಗೆ ಮಣೆ: ಸರ್ವೋದಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಅನಿಲ್ ಕುಮಾರ್ ಎಚ್. ಅವರು ಮಾತನಾಡಿ, "ಈ ಚಿತ್ರದಲ್ಲಿ ಉತ್ತರ ಕರ್ನಾಟಕ ಭಾಗದ ಕಲಾವಿದರೇ ಹೆಚ್ಚಾಗಿ ನಟಿಸಿರುವುದು ಹೆಮ್ಮೆಯ ವಿಷಯ. ಯಾವುದೇ ಅಡ್ಡಿ ಆತಂಕಗಳಿಲ್ಲದೆ ಚಿತ್ರವು ಯಶಸ್ವಿಯಾಗಿ ಬಿಡುಗಡೆಯಾಗಲಿ," ಎಂದು ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಯ ಉಪನ್ಯಾಸಕರು, ಸಿಬ್ಬಂದಿ ವರ್ಗ ಮತ್ತು



ವಿದ್ಯಾರ್ಥಿಗಳು ಚಿತ್ರತಂಡಕ್ಕೆ ಶುಭ ಕೋರಿದರು. ಚಿತ್ರದ ವಿಶೇಷತೆಗಳು: ಜಯರಾಮ್ ಕ್ರಿಯೇಷನ್ ಲಾಂಛನದಲ್ಲಿ ಮೂಡಿಬರುತ್ತಿರುವ ಈ ಚಿತ್ರಕ್ಕೆ ಅಶೋಕ್ ಜೈರಾಮ್ ಅವರೇ ಕಥೆ, ಚಿತ್ರಕಥೆ, ಸಾಹಿತ್ಯ, ಸಾಹಸ ನಿರ್ದೇಶನ ಹಾಗೂ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಪದ್ಮಶ್ರೀ ಪುರಸ್ಕೃತರಾದ ಡಾ. ಜೋಗತಿ ಮಂಜಮ್ಮ ಅವರು ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಂಸ್ಕೃತಿ ಲಕ್ಷ್ಮಣ್ ಅವರು 'ಲೀಲಾ' ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರವು ಬರುವ 2026ರ ಜನವರಿ ತಿಂಗಳಲ್ಲಿ ರಾಜ್ಯಾದ್ಯಂತ ಬಿಡುಗಡೆಯಾಗಲು ಸಜ್ಜಾಗಿದೆ ಎಂದು ನಿರ್ದೇಶಕ ಅಶೋಕ್ ಜೈರಾಮ್ ತಿಳಿಸಿದರು.

## ಜಿಲ್ಲಾ ಮಟ್ಟದ ಗ್ಯಾರಂಟಿ ಕಾರ್ಯಾಗಾರ: ಸಚಿವ ಎನ್ ಎಸ್ ಬೋಸರಾಜು

❑ ನೈಜ್ಯ ದೆಸೆ ನ್ಯೂಸ್

**ಕೊಡಗು: ನಾಡಿನ ಬಡವರು, ದೀನ ದಲಿತರಿಗೆ ಶಕ್ತಿ ತುಂಬುತ್ತಿರುವ ನಮ್ಮ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ಮಡಿಕೇರಿಯ ಕೊಡಗು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೊಡಗು ಜಿಲ್ಲಾ ಮಟ್ಟದ ಗ್ಯಾರಂಟಿ ಕಾರ್ಯಾಗಾರ ಮತ್ತು ತುರಾಜು,**




ಜಾಗೃತ ಗ್ಯಾರಂಟಿ ಉತ್ಸವದಲ್ಲಿ ಇಂದು ವಿರಾಜಪೇಟೆ ಶಾಲ ಪ್ರತಿ ಮನೆಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಸನ್ಮಾನ್ಯ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಶ್ರೀ ಪೊನ್ನಣ್ಣ ಅವರೊಂದಿಗೆ ಪಾಲ್ಗೊಂಡ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪರಿಷತ್ತಿನ ಸಭಾ ನಾಯಕರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್ ಎಸ್ ಬೋಸುರಾಜು ಜೀ ಅವರು. ಉತ್ಸವದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯಾಧ್ಯಕ್ಷರಾದ ಶ್ರೀ ಎಚ್. ಎಮ್ ರೇವಣ್ಣನವರು, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಧರ್ಮಜ ಉತ್ತಪ್ಪ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಉಪಸ್ಥಿತರಿದ್ದರು.

# ಪೋತ್ನಾಳ: ಕಟ್ಟಡ ಕಾರ್ಮಿಕರ ಸಂಘ ಉದ್ಘಾಟನೆ ಸರ್ಕಾರದ ಸೌಲಭ್ಯ ಸದ್ಬಳಕೆಗೆ ಸೈಯದ್ ಖಾಲಿದ್ ಖಾದ್ರಿ ಕರೆ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಪೋತ್ನಾಳ ಗ್ರಾಮದಲ್ಲಿ 'ನಿತ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ'ದ ಉದ್ಘಾಟನಾ ಸಮಾರಂಭವು ಇತ್ತೀಚೆಗೆ ಜರುಗಿತು. ಕಾರ್ಯಕ್ರಮವನ್ನು ಸೈಯದ್ ಖಾಲಿದ್ ಖಾದ್ರಿ ಅವರು ಉದ್ಘಾಟಿಸಿದರು. ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಖಾದ್ರಿ ಅವರು, "ನಿತ್ಯ ಕಟ್ಟಡ ನಿರ್ಮಾಣದ ಕಾಯಕದಲ್ಲಿ ತೊಡಗುವ ಕಾರ್ಮಿಕರು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು.**

ಜೊತೆಗೆ ಸರ್ಕಾರದಿಂದ ಕಾರ್ಮಿಕರಿಗೆ ಹಾಗೂ ಅವರ ಮಕ್ಕಳ ಶಿಕ್ಷಣಕ್ಕೆ ಸಿಗುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಮಕ್ಕಳ ಉಜ್ವಲ ಭವಿಷ್ಯ ರೂಪಿಸಬೇಕು," ಎಂದು ಸಲಹೆ ನೀಡಿದರು. ಕಟ್ಟಡ ಕಟ್ಟುವ ಮೂಲಕ ಸಮಾಜ ನಿರ್ಮಾಣ ಮಾಡುವ ಕಾರ್ಮಿಕರ ಈ ನೂತನ ಸಂಘವು, ಸಮಾಜಮುಖಿ ಕಾರ್ಯಗಳಲ್ಲಿಯೂ ಹೆಜ್ಜೆ ಮುಂದಿಡಲಿ ಎಂದು ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಫಾದರ್ ಸತೀಶ್ ಫರ್ನಾಂಡಿಸ್, ರಾಜಾ ಸುಭಾಷ್ ಚಂದ್ರ ನಾಯಕ್, ಸತ್ತರ್ ಬಂಗ್ಲೆವಾಲೆ, ಶಬ್ಬೀರ್ ಜಾಲಹಳ್ಳಿ, ಶರ್ಫೋದ್ದಿನ್ ಪೋತ್ನಾಳ, ಚೆನ್ನಪ್ಪ, ಮಾಂತೇಶ್ ನಾಯಕ್, ಈರಣ್ಣ ಹಾಗೂ ಸಂಘದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

# ಸಚಿವ ಪ್ರಿಯಾಂಕ್ ಖರ್ಗೆರವರ ಹುಟ್ಟು ಹಬ್ಬದ ಪ್ರಯುಕ್ತ ಅನ್ನದಾನ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲಾ ಕಾಂಗ್ರೆಸ್ ವತಿಯಿಂದ 22 ನವೆಂಬರ್ ಕರ್ನಾಟಕ ರಾಜ್ಯದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಮುಖ ನಾಯಕರು ಹಾಗೂ ಪ್ರಸ್ತುತ ಸಚಿವ ಸಂಪುಟದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.**

ಚಿತ್ತಾಪುರ ಕ್ಷೇತ್ರದ ಶಾಸಕರು ಹಾಗೂ ಡಿಜಿಟಲ್ ಆಡಳಿತ, ಗ್ರಾಮೀಣ ಸಬಲೀಕರಣ ಮತ್ತು ರಾಜಕೀಯದಲ್ಲಿ ಯುವಜನರ ಪಾಲ್ಗೊಳ್ಳುವಿಕೆಯನ್ನು




ಸಕ್ರಿಯವಾಗಿ ಪ್ರತಿಪಾದಿಸುತ್ತಿರುವ. ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸುಪುತ್ರರಾಗಿರುವ ಪ್ರಿಯಾಂಕಾ ಖರ್ಗೆ ರವರ ಹುಟ್ಟುಹಬ್ಬವನ್ನು ಕೇಕ್ ಕಟ್ ಮಾಡಿ ಅಣ್ಣ ಪ್ರಸಾದ್ ಮಾಡಿಸುವ ಮೂಲಕ ಸಿಹಿ ತಿನಿಸಿ ಆಚರಣೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ವಿಧಾನ ಪರಿಷತ್ ಶಾಸಕರಾದ ವಸಂತ್ ಕುಮಾರ್, ಕಾಂಗ್ರೆಸ್ ರಾಯಚೂರು ಜಿಲ್ಲಾ ಜಂಟಿ ಕಾರ್ಯದರ್ಶಿ ಶ್ರೀನಿವಾಸ, ಕಾಂಗ್ರೆಸ್ ಮುಖಂಡರಾದ ಅಸ್ಲಾಂ ಪಾಷಾ , ಮುಖಂಡರಾದ ಅಬ್ದುಲ್ ಕರೀಮ್ , ಜಿ ಕುಮಾರ್ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

## ಕಾಳಿಕಾದೇವಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಕಾಳಿಕಾ ದೇವಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ ಸಂಭ್ರಮದಿಂದ ಆಚರಿಸಲಾಯಿತು. ಮಹಿಳೆಯರು, ಮಕ್ಕಳು ಸೇರಿದಮಥೆ ಭಕ್ತಾದಿಗಳು ದೀಪ ಬೆಳಗಿಸಿ ಸಂಭ್ರಮಿಸಿದರು.**



ಕಾಳಿಕಾದೇವಿ ಉತ್ಸವ ಮೂರ್ತಿಗೆ ಅಭಿಷೇಕ, ಕುಂಕುಮಾರ್ಚನೆ, ಮಹಾಮಂಗಳಾರತಿ ಸೇರಿದಮತೆ ವಿವಿಧ ಧಾರ್ಮಿಕ ಪೂಜಾ ವಿಧಿವಿಧಾನಗಳನ್ನು ಕೈಗೊಳ್ಳಲಾಗಿತ್ತು. ವಿಶ್ವಕರ್ಮ ಸಮಾಜದ ಮುಖಂಡರು ಮತ್ತು ಇನ್ನಿತರ ಭಕ್ತಾದಿಗಳು ಭಾಗವಹಿಸಿದ್ದರು ನಂತರ ಭಕ್ತಾದಿಗಳಿಗೆ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು.

# ಮಸ್ಕಿಯಲ್ಲಿ ವೋಟ್ ಚೋರ್, ಗದ್ದಿ ಚೋಡ್ "ಅಭಿಯಾನ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ 06ನೇ ವಾರ್ಡನಲ್ಲಿ ವೋಟ್ ಚೋರ್, ಗದ್ದಿ ಚೋಡ್ "ಅಭಿಯಾನ ಕಾರ್ಯಕ್ರಮ ಶನಿವಾರ ನಡೆಯಿತು.**

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಸದಸ್ಯ ಎಂ.ಅಮರೇಶ ಮಾತನಾಡಿ ಕೇಂದ್ರ ಸರ್ಕಾರವು ಕಳೆದ 10 ವರ್ಷಗಳಿಂದ ಮತಗಳ್ಳತನದ ಮೂಲಕ ದೇಶದಲ್ಲಿ ಸಂವಿಧಾನ ವಿರೋಧಿ ನಡೆ ಅನುಸರಿಸುತ್ತಿದ್ದು ಇದು ಪ್ರಜಾಪ್ರಭುತ್ವದ ಬುನಾದಿಗೆ ಧಕ್ಕೆ ತರುವ ಬೆಳವಣಿಗೆಯಾಗಿದೆ. ಕೇಂದ್ರ ಬಿಜೆಪಿ ಸರ್ಕಾರವು ಚುನಾವಣಾ ಆಯೋಗವನ್ನು ದುರುಪಯೋಗ ಮಾಡಿಕೊಂಡು ಮತಗಳ್ಳತನ ಮಾಡುತ್ತಿರುವುದರ ವಿರುದ್ಧವಾಗಿ ಕಾಂಗ್ರೆಸ್ ಪಕ್ಷವು ದೇಶಾದ್ಯಂತ ಹಮ್ಮಿಕೊಂಡಿರುವ "ವೋಟ್ ಚೋರ್ ಗದ್ದಿ ಚೋಡ್" ಸಹಿ ಸಂಗ್ರಹವನ್ನು ಪ್ರತಿ ಬೂತ್ ಮಟ್ಟದಲ್ಲಿ ಅಭಿಯಾನ ಮಾಡಲಾಯಿತು.

ನಂತರ ಮಸ್ಕಿ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೃಷ್ಣಾ ಡಿ.ಚಿಗರಿ ಮಾತನಾಡಿ ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ದೇಶದಲ್ಲಿ ಬಿಜೆಪಿ ಸರ್ಕಾರವು ಮತಗಳ್ಳತನ ಮಾಡುವ ಮೂಲಕ ಸಂವಿಧಾನದ ಆಶಯಗಳನ್ನು ಕೊಂದು ಹಾಕುತ್ತಿದೆ. ಪವಿತ್ರವಾದ ನಮ್ಮ ಮತದಾನದ ಹಕ್ಕನ್ನು ಬಿಜೆಪಿ ಪಕ್ಷ ಕಸಿಯುವ ಕೆಲಸ ಮಾಡುತ್ತಿದ್ದು, ನಾವೆಲ್ಲ ಜಾಗೃತರಾಗಿ ಕೇಂದ್ರ ಸರ್ಕಾರದ ಕುಟಿಲ ನೀತಿಯನ್ನು ವಿರುದ್ಧವಾಗಿ ಸಹಿ ಸಂಗ್ರಹದ ಮೂಲಕ ವಿರೋಧಿಸಬೇಕು ಎಂದರು.ಈ ಸಂದರ್ಭದಲ್ಲಿ ಮಾಜಿ ಗ್ರಾ.ಪಂ. ಉಪಾಧ್ಯಕ್ಷ ಅಬ್ದುಲ್ ಗನಿಸಾಬ, ವೀರೇಶ ಆನೆಹೊಸರು, ಖಾಜಿಹುಸೇನ್, ಮಲ್ಲಪ್ಪ ಉಪಸ್ಥಿತಿ ಇದ್ದರು.

# ತುಂಗಭದ್ರಾ ನದಿಯ ಸ್ವಚ್ಛತೆ, ನಮ್ಮೆಲ್ಲರ ಜವಾಬ್ದಾರಿ: ಸಂಚಾಲಕ ಲೋಕೇಶ.

❑ ನೈಜ್ಯ ದೆಸೆ ನ್ಯೂಸ್

**ನದಿಗಳು ಭೂಮಿಯ ಮೇಲಿನ ನೀರಿನ ಪ್ರಾಥಮಿಕ ಮೂಲಗಳಲ್ಲಿ ಒಂದಾಗಿದೆ. ನದಿಗಳು ಕೈಗಾರಿಕೆ, ಕೃಷಿ, ವಿದ್ಯುತ್ ಉತ್ಪಾದನೆ ಸಾರಿಗೆ, ಮೀನುಗಾರಿಕೆಂತಹ ಅನೇಕ ಅಗತ್ಯತೆಗಳಿಗೆ ಮೂಲವಾಗಿದೆ. ಮಾನವರಿಗೆ ಕುಡಿಯಲು ನದಿಗಳು ನೀರನ್ನು ಒದಗಿಸುತ್ತವೆ. ಇಂತಹ ನದಿಗಳನ್ನು ರಕ್ಷಣೆ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ರಾಷ್ಟ್ರೀಯ ಸ್ವಾಭಿಮಾನ ಆಂದೋಲನ, ನವದೆಹಲಿ ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ ಸಂಚಾಲಕ ಲೋಕೇಶ ಹೇಳಿದರು.**

ನಗರದ ಎಲ್.ಬಿ.ಕೆ ಮತ್ತು ನೊಬಲ್ ಪದವಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಲ್ಲಿ ನದಿಯ ಸ್ವಚ್ಛತೆಯ ಕುರಿತು ಜಾಗೃತಿಯನ್ನು ಮೂಡಿಸಲು ರಾಷ್ಟ್ರೀಯ ಸ್ವಾಭಿಮಾನ ಆಂದೋಲನ, ನವದೆಹಲಿ ನಿರ್ಮಲ ತುಂಗಭದ್ರಾ ಅಭಿಯಾನ ಸಮಿತಿ, ಕರ್ನಾಟಕ ಪರ್ಯಾವರಣ ಟ್ರಸ್ಟ್ ಶಿವಮೊಗ್ಗ ಸಹಯೋಗದಲ್ಲಿ ನಿರ್ಮಲ ತುಂಗಭದ್ರಾ ಅಭಿಯಾನ, ಮೂರನೇ ಹಂತದ ಜಲಜಾಗೃತಿ, ಜನಜಾಗೃತಿ, ಪಾದಯಾತ್ರೆಯಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ರಾಷ್ಟ್ರಮಟ್ಟದ ಸಂಸ್ಥೆ, ಪ್ರಕೃತಿ ಕೇಂದ್ರಿತವಾದ ವಿಕಾಸ ಮಾಡುವ ತತ್ವದ ಮೇಲೆ ಕಾರ್ಯ ನಿರ್ವಹಿಸುವ ಬೃಹತ್ ಸಂಸ್ಥೆಯಾಗಿದೆ. ಈ ಸಂಸ್ಥೆ ಚೇರ್ಮನ್ ಗೋವಿಂದ ಆಚಾರ್ಯ, ಸಂಯೋಜಕರು ಮಾಧವನ್ ವೀರಾಪುರ, ಕರ್ನಾಟಕದ ಸಂಯೋಜಕರು ಬಾಲಕೃಷ್ಣ, ನಿರ್ಮಲ ತುಂಗಭದ್ರಾ ಅಭಿಯಾನದ ರಾಜ್ಯದ ಸಂಚಾಲಕರು ದೇಹತ್ ಪಟೇಲ್ ಅವರ ಮಗ ಮಹಿಮಾ ಪಟೇಲ್, ಮೂರು ನದಿಗಳ ಸ್ವಚ್ಛತೆ ಕಡೆ ರಾಷ್ಟ್ರಗಳ ಸಂಸ್ಥೆ ಅಡಿಯಲ್ಲಿ ನಾವು ಇವತ್ತು ಈ ದಕ್ಷಿಣ ಭಾರತದಲ್ಲಿ ವಿಶೇಷವಾಗಿ ಕರ್ನಾಟಕದ ಎರಡು ನದಿಗಳು ಕಾವೇರಿ ಮತ್ತು ತುಂಗಭದ್ರಾ, ಕಾವೇರಿ ನದಿ ಬಗ್ಗೆ ಈಗಾಗಲೇ ಸದ್ಗುರುಗಳು ಸ್ವಚ್ಛತೆ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಹಾಗಾಗಿ ಬಹಳ ಪ್ರಮುಖವಾದದ್ದು ತುಂಬಾ ಉದ್ದವಾಗಿ ಹರಿಯುವ ತುಂಗಭದ್ರಾ ನದಿಯ ಸ್ವಚ್ಛತೆ ಕುರಿತು



ಜಾಗೃತಿ ಮೂಡಿಸಲು ಪಾದಯಾತ್ರೆ ಮಾಡುತ್ತಿದ್ದೇವೆ.

ಈಗಾಗಲೇ ನಾವು ಹಲವು ಮಾರ್ಗದ ಉದ್ದಕ್ಕೂ ನಡೆಸುತ್ತಿದ್ದೇವೆ. ಅನೇಕ ಶಾಲಾ ಕಾಲೇಜಿನ ಮಕ್ಕಳು ಭಾಗವಹಿಸಿದ್ದಾರೆ. ಗ್ರಾ.ಪಂ.ಸದಸ್ಯರು ಅನೇಕ ಪರಿಸರ ಪ್ರೇಮಿಗಳು ಭಾಗವಹಿಸಿದ್ದಾರೆ. ಸೌರವ್ಯೂಹದಲ್ಲಿ ಜೀವಿಗಳನ್ನು ಹೊಂದಿರುವ ಒಂದು ಗ್ರಹ ಭೂಮಿ. ಭೂಮಿಯಲ್ಲಿ ಬದುಕುವಂತಹ ಜೀವರಾಶಿಗಳಿಗೆ ಪಂಚಭೂತಗಳಲ್ಲಿ ಒಂದಾದ ನೀರು ಅತ್ಯವಶ್ಯಕ, ಭೂಮಿಯಲ್ಲಿ 73 ರಷ್ಟು ನೀರು, 27 ಭಾಗದಷ್ಟು ಭೂಭಾಗ ಇದೆ. ನಾವು ಭೂಮಿಯನ್ನು ಖಂಡಗಳಾಗಿ ವಿಭಾಗ ಮಾಡಿದ್ದೇವೆ. ಅದರಲ್ಲಿ ಭಾರತ ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಂಡಿದ್ದೇವೆ.

ನೀರು ನಮ್ಮ ಉಪಯೋಗಕ್ಕೆ 97 ರಷ್ಟು ಬರುವುದಿಲ್ಲ 2 ರಷ್ಟು ಭಾಗ ಹಿಮಾಲಯದಲ್ಲಿ ಹೆಪ್ಪುಗಟ್ಟಿದೆ. ಇನ್ನು ಉಳಿದ 1 ರಷ್ಟು ಭಾಗ ಮಾತ್ರ ಉಪಯೋಗಕ್ಕೆ ಬಳಸುತ್ತಿದ್ದೇವೆ. ಇಂತಹ 1 ರಷ್ಟು ನೀರು ಮಾಲಿನ್ಯಕ್ಕೆ ಒಳಗಾಗಿದೆ. ನೀರಿನ ಬಳಕೆ ಮತ್ತು ಸಮರ್ಪಕದ ಬಗ್ಗೆ ನಾವೆಲ್ಲರೂ ಯೋಚಿಸುವ ಸ್ಥಿತಿಯಲ್ಲಿದ್ದೇವೆ. ನದಿಯ ನೀರನ್ನು ನಾವು ಕೈಗಾರಿಕೆಗಳ ಮೂಲಕ ರಾಸಾಯನಿಕ ವಸ್ತುಗಳಿಂದ ಅಶುದ್ಧಗೊಳಿಸುತ್ತಿದ್ದೇವೆ. ಇದೇ ನದಿಯ ನೀರು ಕೃಷಿಗೂ ಬಳಕೆಯಾಗುತ್ತದೆ. ಆಹಾರದ ಮೂಲಕ ನಮ್ಮೊಳಗೆ ಸೇರಿ ಅನೇಕ ರೋಗಗಳಿಗೆ ಕಾರಣವಾಗುತ್ತದೆ ಎನ್ನುವ ಗಂಭೀರ ಸಂಗತಿಯನ್ನು ಮರೆಯುತ್ತಿದ್ದೇವೆ. ನಾವು ನದಿಯನ್ನು ಸ್ವಚ್ಚ ಮಾಡದೇನೆ, ತನ್ನಂತ ತಾನೆ ನದಿ ಸ್ವಚ್ಛ ಹಾಗುವುದಿಲ್ಲ.

ಏಕ ಬಳಕೆಯ ಪ್ಲಾಸ್ಟಿಕ್ ಬ್ಯಾಗ್, ಇನ್ನಿತರೆ ವಸ್ತುಗಳನ್ನು ಬಳಸುವುದು ಕಡಿಮೆ ಮಾಡಬೇಕು. ಪ್ರತಿ ನಗರ ಊರುಗಳಲ್ಲಿ ಇವತ್ತು ಆಸ್ಪತ್ರೆಗಳು ಹೆಚ್ಚಾಗಿವೆ ಆದರೆ ನೀರು ಶುದ್ಧೀಕರಣ ಘಟಕಗಳು ಇಲ್ಲ. ನೀರಿನ ಶುದ್ದೀಕರಣ ಘಟಕಗಳನ್ನು ಸ್ಥಾಪಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಎಲ್.ಬಿ.ಕೆ ಮತ್ತು ನೊಬಲ್ ಕಾಲೇಜಿಗೆ ಆಗಮಿಸಿ ತುಂಗಾಭದ್ರಾ ನದಿಯ ಸ್ಥಿತಿಗತಿಯ ಬಗ್ಗೆ ಜಾಗೃತಿ ಮೂಡಿಸುವ ಸಂಚಾಲಕರಿಗೆ ಸನ್ಮಾನಿಸಲಾಯಿತು ಪರಶುರಾಮ ಮಲ್ಲಾಪುರ ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳನ್ನು ಈ ಅಭಿಯಾನಕ್ಕೆ ಕಳಿಸುತ್ತೇವೆಂದು ಎಲ್ಲರೂ ಸೇರಿ ತುಂಗಭದ್ರೆಯನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಕಾರ್ಯಶೀಲರಾಗೋಣ ಎಂದರು. ಪ್ರಾಸ್ತಾವಿಕವಾಗಿ ಕಾಲೇಜಿನ ಕಾರ್ಯದರ್ಶಿ ಡಾ.ಅರುಣಕುಮಾರ ಬೇರ್ಗಿ ಮಾತನಾಡಿದರು. ಹೊನ್ನಪ್ಪ ಬೆಳಗುರ್ಕಿ, ಎನ್.ಎಸ್.ಎಸ್ ಕಾರ್ಯಕ್ರಮದ ಅಧಿಕಾರಿಗಳು ನಿರೂಪಿಸಿದರು. ಈ ವೇಳೆ: ನೊಬಲ್ ಕಾಲೇಜಿನ ಉಪಾಧ್ಯಕ್ಷ ಶಂಕ್ರಪ್ಪ ಪತ್ತಾರ್, ಎಲ್.ಬಿಕೆ ಕಾಲೇಜಿನ ಪ್ರಿನ್ಸಿಪಾಲ್ ಶಿವಕುಮಾರ ಬಿಂಗಿ, ನೊಬಲ್ ಕಾಲೇಜ ಪ್ರಿನ್ಸಿಪಾಲ್ ಐಶ್ವರ್ಯ ದಳವಾಯಿ, ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

KEA ನೇಮಕಾತಿ 2025: 33 ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನವೆಂಬರ್ 2025 ರ KEA ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 10–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಗಳ ಸಂಖ್ಯೆ: ಸಹಾಯಕ ಆಡಳಿತ ಅಧಿಕಾರಿ 2,ಸಹಾಯಕ ಲೆಕ್ಕಪತ್ರ ಅಧಿಕಾರಿ 2, ಸಹಾಯಕ ಕಾನೂನು ಅಧಿಕಾರಿ 6,ಸಹಾಯಕ ಕಾರ್ಮಿಕ ಕಲ್ಯಾಣ ಅಧಿಕಾರಿ 5,ಸಹಾಯಕ ಮೆಕ್ಯಾನಿಕಲ್ ಎಂಜಿನಿಯರ್ 8 ಸಹಾಯಕ ಸಂಚಾರ ವ್ಯವಸ್ಥಾಪಕ 10 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 21–11–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–ಡಿಸೆಂಬರ್–2025 ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 11–12–2025 https://cetonline.karnataka.gov.in/KEARECRUITMENT_NWKRTC/FORMS/LOGIN.ASPX ?Official Website: cetonline.karnataka.gov.in ಕೊನೆಯ ದಿನಾಂಕ: 10–ಡಿಸೆಂಬರ್–2025

## ಮಕ್ಕಳ ಹಕ್ಕುಗಳ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢ ಶಾಲೆಯಲ್ಲಿ ತಾಲೂಕ ಕಾನೂನು ಸೇವಾ ಸಮಿತಿ ಮಾನ್ವಿ ಹಾಗೂ ತಾಲೂಕ ನ್ಯಾಯವಾದಿಗಳ ಸಂಘ ಮಾನ್ವಿ ಮತ್ತು ಶಿಕ್ಷಣ ಇಲಾಖೆ ಮಾನ್ವಿ ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ದಿನ ಹಾಗೂ ಮಕ್ಕಳ ಹಕ್ಕುಗಳು, ಬಾಲ್ಯ ವಿವಾಹ ಮತ್ತು ಮಕ್ಕಳ ಕುರಿತು ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಆನಂದ್ ಎಚ್. ಕೊಣ್ಣೂರು ಮಾತನಾಡಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಹಾಗೂ ಸುರಕ್ಷತೆಗಾಗಿ ವಿಶೇಷ ಕಾನೂನು ಗಳಿದ್ದು, ಮಕ್ಕಳು ತಮಗೆ ಆಗುತ್ತಿರುವ ಅನ್ಯಾಯಗಳಿಗೆ ಕಾನೂನು ಅಡಿಯಲ್ಲಿ ನ್ಯಾಯವನ್ನು ಪಡೆದುಕೊಳ್ಳಬಹುದಾಗಿದೆ . ಮಕ್ಕಳ ಮೇಲಿನ ದೌರ್ಜನ್ಯ ತಡೆಗೆ ಪೋಕ್ಸೋ ಕಾಯ್ದೆ ಜಾರಿ ಮಾಡಲಾಗಿದೆ. ಮಕ್ಕಳು ತಮ್ಮ ಸಮಸ್ಯೆಗಳನ್ನು ಮಕ್ಕಳ ಹಕ್ಕುಗಳ ರಕ್ಷಣ ಆಯೋಗ, ತಾಲೂಕ ಕಾನೂನು ಸೇವಾ ಸಮಿತಿ, ಪೊಲೀಸ್ ಇಲಾಖೆಗೆ,ಶಿಶುಅಭಿವೃದ್ಧಿ



ಇಲಾಖೆಯ ಅಧಿಕಾರಿಗಳಿಗೆ ಮಾಹಿತಿ ನೀಡಿ ನ್ಯಾಯವನ್ನು ಪಡೆಯಬಹುದು ಗುಪ್ತ ವಿಚಾರಣೆ ನಡೆಸಿ ಆರೋಪಿಗೆ ಶಿಕ್ಷೆ ನೀಡಲಾಗುತ್ತದೆ. ದೂರುದಾರರ ಹೆಸರು ಬಹಿರಂಗ ಪಡೆಸುವುದಿಲ್ಲ.

ವಿದ್ಯಾರ್ಥಿಗಳು ಸೋಶಿಯಲ್ ಮೀಡಿಯಾದಿಂದ ಜಾಗರುಕರಾಗಿ ಕಲಿಕೆಗೆ ಹೆಚ್ಚು ಅದ್ಯತೆ ನೀಡಬೇಕು ಎಂದು ತಿಳಿಸಿದರು. ನ್ಯಾಯವಾದಿಗಳಾದ ಶ್ರೀದೇವಿ ಶರಣ ಪಾಟೀಲ್ ಮಕ್ಕಳ ಹಕ್ಕುಗಳ ಕು–ರಿತು ವಿಶೇಷ ಉಪನ್ಯಾಸ ನೀಡಿದರು. ಸಹಾಯಕ ಸರ್ಕಾರಿ ಅಭಿಯೋಜಕಿ ಅರ್ಚನಾ ಯಾದವ್, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್ ದೊಡ್ಡಮನಿ. ಉಪ ಪ್ರಚಾರ್ಯರಾದ ಸಂಜೀವ್ ಸುಧಾಕರ್,ಹಿ–ರಿಯ ವಕೀಲರಾದ ಸ್ಟೆಲ್ಲಾ ಶಾರ್ಲೆಟ್ ಮತ್ತು ಗುಂಡಮ್ಮ ಮೇಟಿ , ಚನ್ನಬಸವ ನಾಯಕ್ ಬಲ್ಲಟಗಿ, ಮನೋಹರ ವಿಶ್ವಕರ್ಮ, ದತ್ತಾತ್ರೇಯ ಕೊಟ್ನೆಕಲ್‌ಸೇರಿದಂತೆ ಶಾಲೆಯ ಉಪನ್ಯಾಸಕರು, ವಿದ್ಯಾರ್ಥಿಗಳು, ಇದ್ದರು.

## *ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರೋಡನೆ ಭಾಗಿಯಾದ ಯುವ ನಾಯಕ ರವಿ ಭೂಸರಾಜು

ನೈಜ್ಯ ದೆಸೆ ನ್ಯೂಸ್

ಮೈಸೂರಿನ ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಇಂದು ಆಯೋಜಿಸಿದ್ದ ಸಂಘದ ವಾರ್ಷಿಕೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಮಾನ್ಯ ಸಮಾಜಕಲ್ಯಾಣ ಸಚಿವರಾದ ಡಾ. ಹೆಚ್.ಸಿ ಮಹದೇವಪ್ಪ ಅವರೊಂದಿಗೆ ಪಾಲ್ಗೊಳ್ಳಲಾಯಿತು.



ಈ ಸಂದರ್ಭದಲ್ಲಿ ಶ್ರೀ ದೇವರಾಜ ಅರಸು ಮತ್ತು ಎಲ್. ಜಿ ಹಾವನೂರು ಪ್ರಶಸ್ತಿಗಳನ್ನು ವಿತರಿಸಲಾಯಿತು. ಸಮಾರಂಭದಲ್ಲಿ, ಬಿಸಿಎಂ ವಿದ್ಯಾರ್ಥಿನಿಲಯದ ಹಿರಿಯ

## ತಮ್ಮ ದೇಹ ದಾನ ಮಾಡುವುದರ ಮೂಲಕ ಇತರರಿಗೆ ಮಾದರಿಯಾದ ವೆಂಕಟೇಶ್ವರ ಶಾಲೆಯ ನಿವೃತ್ತ ಶಿಕ್ಷಕರು ಶಿವಣ್ಣ ಸಣ್ಣಪ್ಪನವರು

ನೈಜ್ಯ ದೆಸೆ ನ್ಯೂಸ್

35 ವರ್ಷಗಳ ಕಾಲ ಇಂಗ್ಲಿಷ್ ವಿಷಯ ಶಿಕ್ಷಕರಾಗಿ ಸೇವೆ ಹಾಗೂ ಬಸವ ತತ್ವದ ಸಿದ್ಧಾಂತಗಳನ್ನು ಪಾಲಿಸುವ, ಸರಳ ವ್ಯಕ್ತಿತ್ವ ಗುಣ ಹೊಂದಿದ್ದ ವೆಂಕಟೇಶ್ವರ ಪ್ರೌಢ ಶಾಲೆ ಸಿಂಧನೂರು ನಿವೃತ್ತಿ ಶಿಕ್ಷಕರು ಆಗಿರುವ ಶಿವಣ್ಣ ಹ ಸಣ್ಣಪ್ಪನವರು ಲಿಂಗೈಕ್ಯರಾಗಿದ್ದಾರೆ ಅವರ ಅಂತ್ಯ ಸಂಸ್ಕಾರ ಬಾಗಲಕೋಟೆ ನಗರದ ಗದ್ದನಕೇರಿಯಲ್ಲಿ ನೆರವೇರಿಸಲಾಗಿದೆ.



ತಮ್ಮ ದೇಹ ದಾನ ಮಾಡುವುದರ ಮೂಲಕ ಇತರರಿಗೆ ಮಾದರಿ ವ್ಯಕ್ತಿಗಳು ಆಗಿದ್ದಾರೆ,,,, *ಬಹಳ ವಿದ್ಯಾರ್ಥಿಗಳಿಗೆ ಜೀವನ ರೂಪಿಸಿದ ಸಣ್ಣಪ್ಪ ಶಿಕ್ಷಕರು *ಶ್ರೀ ವೆಂಕಟೇಶ್ವರ ಪ್ರೌಢಶಾಲೆ ಸಿಂಧನೂರುದಲ್ಲಿ 35 ವರ್ಷಗಳ ಕಾಲ ಇಂಗ್ಲಿಷ್ ವಿಷಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದಂತಹ ಶ್ರೀ ಸಣ್ಣಪ್ಪನವರು ಗುರುಗಳು ಇಂದು ವಿಧಿವಶರಾಗಿರುತ್ತಾರೆ. ಇವರ ಆತ್ಮಕ್ಕೆ ಭಗವಂತ ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ... ವೆಂಕಟೇಶ್ವರ ಪ್ರೌಢಶಾಲೆ ಆಡಳಿತ ಮಂಡಳಿ ಹಾಗೂ ಶಿಷ್ಯರ ಬಳಗ ಸಿಂಧನೂರು.

## ಮಾನ್ವಿ ತಾಲೂಕಿನ ಯುವಕರು ಭಾರತೀಯ ಸೇನೆಗೆ ಆಯ್ಕೆ :ದೇಶಭಕ್ತರ ಹರ್ಷ

ನೈಜ್ಯ ದೆಸೆ ನ್ಯೂಸ್

ಮಾನ್ವಿ: ತಾಲೂಕಿನ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಯುವಕರು ರಾಯಚೂರಿನ ಕೃಷಿ ವಿಶ್ವವಿದ್ಯಾನಿಲಯ ಮೈದಾನದಲ್ಲಿ ಅಗ್ನಿವೀರ್ ಸೇನಾ ನೇಮಕಾತಿಯಲ್ಲಿ ಎಲ್ಲಾ ವಿಭಾಗಗಳಲ್ಲಿ ಅರ್ಹತೆ ಪಡೆದು ಮೆರಿಟ್ ಲಿಸ್ಟ್‌ನಲ್ಲಿ ಆಯ್ಕೆಯಾಗಿದ್ದಾರೆ.

ಮಾನ್ವಿ ತಾಲೂಕಿನ ಯುವಪ್ರತಿಭೆಗಳು 1 .ಮಹೇಶ್ ನಾಯಕ್ ತಂದೆ ಈರಣ್ಣ ಸಾದಾಪುರ 2.ವೀರಭದ್ರ ತಂದೆ ನಾಗಪ್ಪ ಸಾದಾಪುರ 3.ನಾಗರಾಜ್ ನಾಯಕ ತಂದೆ ಬಸವರಾಜ ಹರವಿ 4.ವೀರೇಶ್ ನಾಯಕ ತಂದೆ ಭಸ್ಮಾಸುರ ಕಪಗಲ್ 5.ವಿಜಯಕುಮಾರ್ ತಂದೆ ಸಣ್ಣ



ತಿಮ್ಮಯ್ಯ ಗೊರ್ಕಲ್ 6.ತಾಯಣ್ಣ ತಂದೆ ಆದೆಪ್ಪ ಕುರಡಿ ಈ ಯುವಕರು ಭಾರತೀಯ ಸೇನೆಗೆ ಆಯ್ಕೆಯಾದದ್ದು ತಾಲೂಕಿನ ಗ್ರಾಮೀಣ ಜನತೆಗೆ ಹಾಗೂ ದೇಶಪ್ರೇಮಿಗಳಿಗೆ ಸಂತಸವಾಗಿದೆ. ಕಾರಣ ಈ ಎಲ್ಲಾ ಯುವಕರು ತಂದೆ ತಾಯಿ ಜೊತೆ ಜಮೀನುಗಳಲ್ಲಿ ಕೆಲಸ ಮಾಡುತ್ತಾ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಾ ಶರೀರವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡು ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ದೇಶ ಸೇವೆಗೆ ಸನ್ನದ್ಧರಾಗಿದ್ದಾರೆ.

ಈಗ ದೇಶ ಸೇವೆಗೆ ನೇಮಕವಾಗಿದ್ದಾರೆ ಇವರ ಅಪಾರ ಸೇವೆ ದೇಶಕ್ಕೆ ಇರಲೆಂದು ಖಾಸಗಿ ಕಾಲೇಜುಗಳ ಉಪನ್ಯಾಸಕರ ಸಂಘದ ತಾಲೂಕ ಅಧ್ಯಕ್ಷರಾದ ಆಂಜನೇಯ ನಸಲಾಪುರ ಅಭಿನಂದಿಸಿದ್ದಾರೆ. ಮಾನ್ವಿ ತಾಲೂಕಿನ ಖಾಸಗಿ ಕಾಲೇಜಿನ ಉಪನ್ಯಾಸಕರು ಹಾಗೂ ಸರ್ಕಾರಿ ಕಾಲೇಜಿನ ಉಪನ್ಯಾಸಕರ ಮಾರ್ಗದರ್ಶನದಲ್ಲಿ ಈ ಯುವಕರು ಸೇನೆಗೆ ಆಯ್ಕೆಯಾದದ್ದು ಬಹಳ ಸಂತೋಷ ತಾಲೂಕಿನ ಖಾಸಗಿ ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಜಿಲ್ಲಾಧ್ಯಕ್ಷರು ಹಾಗೂ ತಾಲೂಕಾಧ್ಯಕ್ಷರು ಕೇಂದ್ರೀಯ ಶಶಸ್ತ್ರ ಪಡೆಗಳ ಮಾಜಿ ಯೋಧರ ಕ್ಷೇಮಾಭಿವೃದ್ಧಿಸಂಘ ರಾಯಚೂರು ವಂದೇ ಮಾತರಂ ಯುವ ಸಂಘ ಮದ್ಲಾಪುರ ಹಾಗೂ ತಾಲೂಕಿನ ಸಮಸ್ತ ದೇಶಪ್ರೇಮಿಗಳು ಈ ಯುವಕರನ್ನು ಅಭಿನಂದಿಸಿದ್ದಾರೆ.

## ರಾಜ್ಯದ ಹಲವು ಪೊಲೀಸ್ ಠಾಣೆಗಳಿಗೆ ಬೇಕಾಗಿದ್ದ ನಟೋರಿಯಸ್ ಕಳ್ಳ ಅರೆಸ್ಟ್, ಮೊಬೈಲ್ ಬಳಸದೆಯೇ ಕೃತ್ಯ ಎಸಗುತ್ತಿದ್ದ ಖದೀಮ

ನೈಜ್ಯ ದೆಸೆ ನ್ಯೂಸ್

ರಾಯಚೂರು: ರಾಜ್ಯದಲ್ಲಿ ಕಾಂಗ್ರೆಸ್ ಪದೇ ಪದೇ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ ಅನ್ನೋ ಆರೋಪ ಕೇಳಿಬರುತ್ತಾ ಇದೆ. ಇದೀಗ ಅಂತಹದ್ದೇ ನಟೋರಿಯಸ್ ವ್ಯಕ್ತಿಯನ್ನ ಪೊಲೀಸರು ಲಾಕ್ ಮಾಡಿ ಕಂಬಿ ಹಿಂದೆ ತಳ್ಳಿದ್ದಾರೆ. ರಾಜ್ಯದ 6 ಪೊಲೀಸ್ ಠಾಣೆಗಳಿಗೆ ಬೇಕಾಗಿದ್ದ ಖತರ್ನಾಕ್ ಮನೆಗಳ್ಳನನ್ನು ಬಂಧಿಸುವಲ್ಲಿ ರಾಯಚೂರು ಪೊಲೀಸರು ಯಶಸ್ವಿಯಾಗಿದ್ದಾರೆ.

ರಾಮಕೃಷ್ಣ ಅಲಿಯಾಸ್ ಗುಜ್ಜಲು ರಾಮಕೃಷ್ಣ ಬಂಧಿತ ಆರೋಪಿ ಆಗಿದ್ದು, ಈತ ಆಂಧ್ರಪ್ರದೇಶದ ಧರ್ಮಾವರಂ ಮೂಲದವನು. ರಾಮಕೃಷ್ಣ ಅಲಿಯಾಸ್ ಗುಜ್ಜಲು ರಾಮಕೃಷ್ಣ ರಾಯಚೂರು, ಗೌರಿಬಿದನೂರು, ಹಿರಿಯೂರು & ಹಾವೇರಿ ಸೇರಿದಂತೆ ಗಂಗಾವತಿ



ಹಾಗೂ ಶಿರಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾಕಷ್ಟು ಅಪರಾಧ ಎಸಗಿದ್ದ. ಮೋಸ್ಟ್ ವಾಂಟೆಂಡ್ ಮನೆಗಳ್ಳನಾಗಿದ್ದ ರಾಮಕೃಷ್ಣ ಮೊಬೈಲ್ ಬಳಸದೆಯೇ, ರೈಲು ಮೂಲಕ ಟಾರ್ಗೆಟ್ ಮಾಡಿದ್ದ ಸಿಟಿಗೆ ಹೋಗಿ ಬರುತ್ತಿದ್ದ, ಅಲ್ಲದೆ ಪ್ರಮುಖವಾಗಿ ಭಿಕ್ಷುಕನ ರೀತಿ ಏರಿಯಾ ಪೂರ್ತಿ ಓಡಾಡಿ ಮಾಹಿತಿ ಸಂಗ್ರಹ ಮಾಡಿ ಕಳ್ಳತನ ಮಾಡುತ್ತಿದ್ದ ಎಂಬ ಆರೋಪವನ್ನ ಮಾಡಲಾಗಿದೆ.

ನಟೋರಿಯಸ್ ಮನೆಗಳ್ಳನ ಬಗ್ಗೆ ಪೊಲೀಸರು ಕೂಡ ಸಿಕ್ಕಾಪಟ್ಟೆ ತಲೆಕೆಡಸಿಕೊಂಡು ವಿಚಾರಣೆ ನಡೆಸಿದ್ದು, ಇದೀಗ ರಾಮಕೃಷ್ಣ ಅಲಿಯಾಸ್ ಗುಜ್ಜಲು ರಾಮಕೃಷ್ಣ ಕಂಬಿ ಹಿಂದೆ ಬಿದ್ದಿದ್ದಾನೆ. ಬಂಧಿತ ರಾಮಕೃಷ್ಣನಿಂದ 36 ಲಕ್ಷ ಮೌಲ್ಯದ 315 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ. ಹಾಗೇ ಮನೆಗಳ್ಳತನ ಬಳಿಕ ಚಿನ್ನಾಭರಣ ಖಾಸಗಿ ಬ್ಯಾಂಕ್‌ನಲ್ಲಿ ಅಡವಿಟ್ಟು ರಾಮಕೃಷ್ಣ ಹಣ ಪಡೆದಿದ್ದ. ಬಳಿಕ ಮತ್ತೆ ಕಳ್ಳತನ ಮಾಡಿಕೊಂಡು ಓಡಾಡುತ್ತಿದ್ದು, ರಾಯಚೂರು ನಗರದ ಎಲ್‌ಐಸಿ ಅಧಿಕಾರಿ ಮನೆಯಲ್ಲಿ ನಡೆದ ಕಳ್ಳತನ ಪ್ರಕರಣದಲ್ಲೂ ಈತನ ಪಾತ್ರವಿದೆ ಎಂದು ಆರೋಪ ಮಾಡಲಾಗಿದೆ.

## ಸಿಸಿ ರಸ್ತೆ ಕಾಮಗಾರಿ ಪರಿಶೀಲಿಸಿದ ಶಾಸಕ ಮಾನಪ್ಪ ವಜ್ಜಲ್

ನೈಜ್ಯ ದೆಸೆ ನ್ಯೂಸ್

ಲಿಂಗಸುಗೂರು: ಪಟ್ಟಣದ ಬಸವಸಾಗರ ಕ್ರಾಸ್‌ನಿಂದ ಗಡಿಯಾರ ವೃತ್ತದವರೆಗೆ ನಡೆದಿರುವ ಸಿಸಿ ರಸ್ತೆ ಕಾಮಗಾ–ರಿಯನ್ನು ಶಾಸಕ ಮಾನಪ್ಪ ವಜ್ಜಲ್ ಶುಕ್ರವಾರ ಪರಿಶೀಲಿಸಿದರು. ಗಡಿಯಾರ ವೃತ್ತದ ಮೂಲಕ ಸಾಗುವ ಎಲ್ಲಾ ರಸ್ತೆಗಳನ್ನು ಸಿಸಿ ಮಾಡಿಸಲಾಗುತ್ತಿದೆ.



ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ 20 ಕೋಟಿ ಅನುದಾನ ಒದಗಿಸಿದ್ದೇನೆ. ಕುಡಿಯುವ ನೀರಿನ ಕಾಮಗಾರಿ ನಡೆಯುತ್ತಿದ್ದರಿಂದ ಕೆಲವಡೆ ಸಿಸಿ ರಸ್ತೆ ಕಾಮಗಾರಿ ಆರಂಭಿಸಿಲ್ಲ' ಎಂದರು. 'ಉತ್ತಮ ಗುಣಮಟ್ಟ ಕಾಪಾಡಿ ಶೀಘ್ರವಾಗಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ಕೆ.ನಾಗಭೂಷಣ, ಮುಖಂಡರಾದ ಗಿರಿಮಲ್ಲನಗೌಡ ಕರಡಕಲ್, ಭೀಮಣ್ಣ ಹಿರೇಮನಿ, ವೆಂಕನಗೌಡ ಗುಡದನಾಳ ಸೇರಿದಂತೆ ಅನೇಕರು ಇದ್ದರು.

## ಸನ್ ರೈಸ್ ಕಾಲೇಜಿನಲ್ಲಿ ಶನಿವಾರದ ವಿಶೇಷ ಉಪನ್ಯಾಸ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜು ಸಿಂಧನೂರಿನಲ್ಲಿ ಪ್ರತೀ ಶನಿವಾರದಂತೆ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಉಪನ್ಯಾಸ ಕಾರ್ಯಕ್ರಮದಲ್ಲಿ ಶನಿವಾರ ಸನ್ ರೈಸ್ ವಿದ್ಯಾ ಸಂಸ್ಥೆಗೆ ಸಿಂಧನೂರಿನ ಎ.ಆರ್. ಕೆ ಆರ್ಥೋಪೆಡಿಕ್ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ.ರಾಮಚಂದ್ರ ರೆಡ್ಡಿ .ಕೆ




(MBBS, MD ORTHO, DNB ORTHO) CONSULTANT ORTHOPAEDIC TRAUMA JOINT REPLACEMENT & ARTHROSCOPY SURGEON) ಸರ್ ಇವರು ಆಗಮಿಸಿ ಎಲುಬು ಮುರಿತ ಮತ್ತು ಎಲುಬು ಮುರಿತಗಳ ವಿಧಗಳು ವೈದ್ಯಕೀಯ ನಿರ್ವಹಣೆ ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿ ಹಾಗೂ ನರ್ಸಿಂಗ್ ನ ಮಹತ್ವದ ಕುರಿತು ಮಾತನಾಡಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿದರೂ ಹಾಗೂ ಶನಿವಾರದ ವಿಶೇಷ ಉಪನ್ಯಾಸ ಮಾಡಿದರು.

## ಸನ್ ರೈಸ್ ನರ್ಸಿಂಗ್ ತೃತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಡಾ ನಾಗರಾಜ್ ಕಾಟ್ವ ಅವರಿಂದ ಉದ್ಘಾಟನೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರಿನ ಸನ್‌ರೈಸ್ ಡಿ ಫಾರ್ಮಸಿ , ನರ್ಸಿಂಗ್ ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ತೃತೀಯ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಭವ್ಯವಾದ ಬೀಳ್ಕೊಡುಗೆ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ. ಅತ್ತಾರ್ ಅವರು ವಹಿಸಿದರು. ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಡಾ. ನಾಗರಾಜ್ ಕಾಟ್ವ ರವರು ಮತ್ತು ವೇದಿಕೆ ಮೇಲೆ ಇರುವ ಎಲ್ಲರೂ ಸೇರಿ ದೀಪ ಬೆಳಗುವ ಮೂಲಕ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಡಾ. ನಾಗರಾಜ್ ಕಾಟ್ವ ರವರು ಮಾತನಾಡಿ, "ನರ್ಸಿಂಗ್ ವಿದ್ಯಾಭ್ಯಾಸ ಪೂರ್ಣಗೊಳಿಸಿ ಹೊರಟುತ್ತಿರುವ ನಿಮ್ಮೆಲ್ಲರೂ ಜೀವನದಲ್ಲಿ ಉತ್ತಮ ಭವಿಷ್ಯ ಕಟ್ಟಿಕೊಳ್ಳಬೇಕು. ಸನ್‌ರೈಸ್ ಕಾಲೇಜಿನಿಂದ ಹೊರಬರುತ್ತಿರುವ ವಿದ್ಯಾರ್ಥಿಗಳು ತಮ್ಮ ಸೇವೆಯಿಂದ ಎಲ್ಲರಿಂದಲೂ




'ಅತ್ಯುತ್ತಮ ಕಾಲೇಜಿನ ವಿದ್ಯಾರ್ಥಿಗಳು' ಎಂಬ ಹೆಗ್ಗಳಿಕೆಗೆ ಪಾತ್ರರಾಗಬೇಕು. ಸಮಾಜಕ್ಕೆ ಉತ್ತಮ ಪ್ರಜೆಯಾಗಿರಿ, ಆಸ್ಪತ್ರೆಗಳಲ್ಲಿ ಉತ್ತಮ ನರ್ಸ್ ಆಗಿರಿ, ಮತ್ತು ತಂದೆ–ತಾಯಿಯರಿಗೆ ಹೆಮ್ಮೆಪಡುವ ಮಕ್ಕಳಾಗಿರಿ," ಎಂದು ಸಂದೇಶ ನೀಡಿದರು. ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಇರ್ಫಾನ್ ಕೆ. ಅತ್ತಾರ್ ಮಾತನಾಡಿ, "'ನರ್ಸ್' ಅನ್ನುವ ಪದಕ್ಕೆ ಇರುವ ಮಹತ್ವ ಅಪಾರ. ಒಬ್ಬ ನರ್ಸ್ ಜೀವನದಲ್ಲಿ ಅನುಸರಿಸಬೇಕಾದ ಶಿಸ್ತು, ಸೇವಾಭಾವ ಮತ್ತು ಮನುಷ್ಯತ್ವವೇ ಅವರ ನಿಜವಾದ ಶಕ್ತಿ. ವಿದ್ಯಾರ್ಥಿಗಳು ಈ ಮೌಲ್ಯಗಳನ್ನು ಜೀವನಪೂರ್ತಿ ಪಾಲಿಸಬೇಕು," ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಲಾಜರ್ ಸಿರಿಲ್ ಜಿ ಅವರು ಮಾತನಾಡಿ,




"ನಿಮ್ಮಲ್ಲಿರುವ ಕೌಶಲ್ಯ, ಜ್ಞಾನ ಮತ್ತು ಮನುಷ್ಯತ್ವವೇ ನಿಮ್ಮನ್ನು ಜೀವನದಲ್ಲಿ ಮುನ್ನಡೆಸುತ್ತದೆ. ನೀವು ಜೀವಗಳ ಜೊತೆ ಕೆಲಸ ಮಾಡುವ ವೃತ್ತಿಯವರಾಗಿದ್ದೀರಿ; ಆದ್ದರಿಂದ ನಿಮ್ಮ ಕೌಶಲ್ಯದಿಂದ ರೋಗಿಗಳ ಸೇವೆ ಮಾಡಿ ಸಮಾಜಕ್ಕೆ ಕೀರ್ತಿ ತರುವಂತೆ ಪ್ರಯತ್ನಿಸಬೇಕು," ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಜ್ಞಾನೇಶ್ವರಿ, ಶ್ರೀ ಪ್ರಶಾಂತ್, ಶ್ರೀ ವೀರೇಶ್ ಅವರು ಅತಿಥಿಗಳಾಗಿ ಭಾಗಿಯಾಗಿ ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶಗಳನ್ನು ನೀಡಿದರು. ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಇರ್ಷಾದ್ ಕೆ. ಅತ್ತಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ತಿಳಿಸಿದರು.

ನಂತರ ತೃತೀಯ ವರ್ಷದ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ನಂತರ ಮಧ್ಯಾಹ್ನ ಪ್ರೀತಿಯ ಭೋಜನ ಏರ್ಪಡಿಸಲಾಗಿದ್ದು, ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ವಿದ್ಯಾರ್ಥಿಗಳು ನೀಡಿದ ಮನಮೋಹಕ ಸಾಂಸ್ಕೃತಿಕ ಪ್ರದರ್ಶನದಿಂದ ಕಾರ್ಯಕ್ರಮ ಮನರಂಜನೆಗೊಳಿಸಿ ಯಶಸ್ವಿಯಾಗಿ ಮುಗಿಯಿತು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತಾರ್ ರವರು ಮತ್ತು ಕಾರ್ಯದರ್ಶಿಗಳಾದ ಇರ್ಷಾದ್ ಕೆ, ನರ್ಸಿಂಗ್ ವಿಭಾಗದ ಪ್ರಾಂಶುಪಾಲರಾದ ಸಿರಿಲ್ ಜಿ, ಫಾರ್ಮಸಿ ಪ್ರಾಂಶುಪಾಲರಾದ ವಸಿಂ ಹುಸೇನ್, ಪ್ಯಾರಾ ಮೆಡಿಕಲ್ ಪ್ರಾಂಶುಪಾಲರಾದ ಚಕ್ರವರ್ತಿ, ಎಲ್ಲ ವಿಭಾಗದ ಉಪನ್ಯಾಸಕರು ಹಾಗೂ ವಿದ್ಯಾರ್ಥಿ ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### "MD ಚರ್ಮಶಾಸ್ತ್ರ

MD Dermatology) ಎನ್ನುವುದು ಚರ್ಮ, ಕೂದಲು ಮತ್ತು ಉಗುರುಗಳಿಗೆ ಸಂಬಂಧಿಸಿದ ರೋಗಗಳ ಅಧ್ಯಯನವನ್ನು ಒಳಗೊಂಡಿರುವ 3 ವರ್ಷಗಳ ಸ್ನಾತಕೋತ್ತರ ಪದವಿಯಾಗಿದೆ. ಈ ಕೋರ್ಸ್ ಚರ್ಮರೋಗದ ರೋಗನಿರ್ಣಯ, ಚಿಕಿತ್ಸೆ, ವೆನೆರಿಯಾಲಜಿ ಮತ್ತು ಕುಷ್ಠರೋಗ ನಿರ್ವಹಣೆ ಕುರಿತು ಸಮಗ್ರ ತರಬೇತಿಯನ್ನು ನೀಡುತ್ತದೆ. ಕೋರ್ಸ್‌ಗೆ ಸೇರಲು ಒಃಃಖ ಪದವಿ ಮತ್ತು ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್ ಪೂರ್ಣಗೊಂಡಿರಬೇಕು. ಕೋರ್ಸ್ ವಿವರಗಳು ಅವಧಿ: 3 ವರ್ಷಗಳು. ವಿಷಯಗಳು: ಚರ್ಮರೋಗ, ಲೈಂಗಿಕವಾಗಿ ಹರಡುವ ರೋಗಗಳು ಮತ್ತು ಕುಷ್ಠರೋಗವನ್ನು ನಿರ್ವಹಿಸುವ ಬಗ್ಗೆ ಅಧ್ಯಯನ ಮಾಡಲಾಗುತ್ತದೆ. ತರಬೇತಿ: ಚರ್ಮರೋಗ ಚಿಕಿತ್ಸಾಲಯಗಳು, ವೆನೆರೊಲಾಜಿ ಚಿಕಿತ್ಸಾಲಯಗಳು ಮತ್ತು ಕುಷ್ಠರೋಗ ಚಿಕಿತ್ಸಾಲಯಗಳಲ್ಲಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತದೆ. ಇದರಲ್ಲಿ ಡರ್ಮಟೊಪಾಥಾಲಜಿ, ಕಾಸ್ಮೆಟಿ-ಕ್ ಡರ್ಮಟಾಲಜಿ ಮತ್ತು ಪೀಡಿಯಾಟ್ರಿಕ್ ಡರ್ಮಟಾಲಜಿ ಮುಂತಾದ ವಿಷಯಗಳು ಸೇರಿವೆ. ಅರ್ಹತೆ ಪದವಿ: ಯಾವುದೇ ಮಾನ್ಯತೆ ಪಡೆದ ವೈದ್ಯಕೀಯ ಸಂಸ್ಥೆಯಿಂದ MBBS ಅಥವಾ ಸಮಾನ ಪದವಿ ಪೂರ್ಣಗೊಳಿಸಿರಬೇಕು. ಶೇಕಡಾವಾರು: ಪದವಿಯಲ್ಲಿ ಕನಿಷ್ಠ 50%–55% ಅಥವಾ ಅದಕ್ಕೆ ಸಮನಾದ ಅಂಕಗಳನ್ನು ಪಡೆದಿರಬೇಕು. ಇಂಟ-ರ್ನ್‌ಶಿಪ್: ಒಂದು ವರ್ಷದ ಕಡ್ಡಾಯ ರೋಟರಿ ಇಂಟ-ರ್ನ್‌ಶಿಪ್ ಪೂರ್ಣಗೊಳಿಸಿರಬೇಕು. ನೋಂದಣಿ: ಭಾರತೀಯ ವೈದ್ಯಕೀಯ ಮಂಡಳಿ (MCI) ಅಥವಾ ರಾಜ್ಯ ವೈದ್ಯಕೀಯ ಮಂಡಳಿಯಲ್ಲಿ ನೋಂದಾಯಿಸಿರಬೇಕು. ಉದ್ಯೋಗ ಮತ್ತು ಮುಂದಿನ ಕೋರ್ಸ್‌ಗಳು ಈ ಕೋರ್ಸ್‌ನ ನಂತರ ವೈದ್ಯರು ಸ್ವತಂತ್ರವಾಗಿ ಚರ್ಮರೋಗ ಚಿಕಿತ್ಸಾಲಯಗಳನ್ನು ತೆರೆಯಬಹುದು ಅಥವಾ ಆಸ್ಪತ್ರೆಗಳಲ್ಲಿ ಕೆಲಸ ಮಾಡಬಹುದು. ಇದು ಕೂದಲು ಕಸಿ ಶಸ್ತ್ರಚಿಕಿತ್ಸೆಯಂತಹ ಸೌಂದರ್ಯ ಚಿಕಿತ್ಸೆಯಲ್ಲಿ ಪರಿಣತಿ ಪಡೆಯಲು ಅವಕಾಶ ನೀಡುತ್ತದೆ. ರಾಯಚೂರಿನಲ್ಲಿ ಚರ್ಮರೋಗ ಶಾಸ್ತ್ರದಲ್ಲಿ ಎಂ.ಡಿ. ಪದವಿ ನೀಡುವ ಎರಡು ಕಾಲೇಜುಗಳಿವೆ: ನವೋದಯ ವೈದ್ಯಕೀಯ ಕಾಲೇಜು ಮತ್ತು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (RIMS). ಎರಡೂ ಕಾಲೇಜುಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿವೆ. ಅವುಗಳ ನಡುವಿನ ಆಯ್ಕೆಯು ಖಾಸಗಿ ಅಥವಾ ಸರ್ಕಾರಿ ಸಂಸ್ಥೆಗೆ ನಿಮ್ಮ ಆದ್ಯತೆ ಮತ್ತು ನಿರ್ದಿಷ್ಟ ಶುಲ್ಕ ರಚನೆಗಳನ್ನು ಅವಲಂಬಿಸಿರುತ್ತದೆ.

1ನೇ ಪುಟದಿಂದ....

ಎಸ್ ಪಕ್ಷದಲ್ಲಿರುವಂತ ನಿಷ್ಠಾವಂತ ಕಾರ್ಯಕರ್ತರು ಸಿಗಲ್ಲ. ಇದು ದೇವಗೌಡರು ಹಾಗೂ ಕುಮಾರಣ್ಣ ಅವರು ಸಂಪಾದನೆ ಮಾಡಿರುವ ಆಸ್ತಿ. ನನಗೆ ಇರುವ ಗುರಿ ಒಂದೇ ಕುಮಾರಣ್ಣ ಅವರನ್ನು ರಾಜ್ಯದಲ್ಲಿ ಮುಖ್ಯಮಂತ್ರಿ ಮಾಡಬೇಕು ಎಂದು ಹೇಳಿದರು. ದೇವೇಗೌಡರಿಗೆ ಇರುವುದು ಒಂದೇ ಆಸೆ. ಅವರ ಕಣ್ಮುಂದ್ದೆ ಜೆಡಿಎಸ್ ಪಕ್ಷವನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ನಾವೆಲ್ಲರೂ ಹೋರಾಟ ಮಾಡೋಣ. ಜನತಾದಳ ಸದಸ್ಯತ್ವದ ಅಭಿಯಾನ ಶೇ.30ರಿಂದ ಶೇ. 40 ರಷ್ಟನ್ನು ನಾವು ಗುರಿ ತಲುಪಿದ್ದೇವೆ. ಮತ್ತಷ್ಟು ಚುರುಕಾಗಿ ಮಾಡಬೇಕು ಎಂದು ಕಾರ್ಯಕರ್ತರಿಗೆ ಸಲಹೆ ಮಾಡಿದರು. ರಾಜ್ಯದಲ್ಲಿ ಪ್ರಾದೇಶಿಕ ಪಕ್ಷವೊಂದು 25 ನೇ ವರ್ಷಾಚರಣೆ ಮಾಡುತ್ತಿರುವುದು ರಾಜ್ಯದ ರಾಜಕೀಯ ಇತಿಹಾಸದಲ್ಲಿಯೇ ಇದೆ ಮೊದಲು. ಪಕ್ಷದ ಬೆಳವಣಿಗೆಗಾಗಿ ತನು, ಮನ, ಧನ ಎಲ್ಲವನ್ನೂ ಅರ್ಪಿಸಿ, ಹೋರಾಟ ಮಾಡಿ, ಕೇಸ್ ಗಳನ್ನು ಹಾಕಿಸಿಕೊಂಡು ಪ್ರತಿ ಬೂತ್ ನಲ್ಲಿ ಜೆಡಿಎಸ್ ಧ್ವಜವನ್ನು ಹಾ-ರಿಸಿದ ನಮ್ಮ ಚಿನ್ನದಂತಹ ಕಾರ್ಯಕರ್ತರಿಂದ ಇದು ಸಾಧ್ಯವಾಗಿದೆ. 25 ವರ್ಷಗಳ ಕಾಲ ನೆಲ, ಜಲ, ಭಾಷೆಗಾಗಿ ಹೋರಾಟ ಮಾಡುತ್ತಾ ಬಂದಿರುವ ಮಾಜಿ ಪ್ರಧಾನಮಂತ್ರಿ ದೇವೇಗೌಡರು ಹಾಗೂ ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ರೈತರ ಪರವಾಗಿ ಆಡಳಿತ ಮಾಡಿದ ಕುಮಾರಣ್ಣನವರ ಕೊಡುಗೆಯನ್ನು ನಾವೆಲ್ಲರೂ ಸ್ಮರಿಸಬೇಕು ಎಂದು ನಿಖಿಲ್ ಅವರು ಹೇಳಿದರು. ಈ ರಜತ ಮಹೋತ್ಸವ ಕಾರ್ಯಕ್ರಮವನ್ನು ನಾಡಿನೆಲ್ಲಡೆ ಆಚರಿಸೋಣ, ಈವರೆಗೆ 52 ವಿಧಾನಸಭಾ ಕ್ಷೇತ್ರದಲ್ಲಿ ಜನರೊಂದಿಗೆ ಜನತಾಳ ಕಾರ್ಯಕ್ರಮ ಮಾಡಿದ್ದೇನೆ. ಮುಂಬರುವ ದಿನಗಳಲ್ಲಿ ಎರಡನೇ ಹಂತದ ಪ್ರವಾಸದ ಮೂಲಕ ಎಲ್ಲ ವಿಧಾನಸಭಾ ಕ್ಷೇತ್ರಗಳಿಗೆ ಆಗಮಿಸುತ್ತೇನೆ. ಮುಂಬರುವ 2028 ರ ಚುನಾವಣೆಯಲ್ಲಿ ನಾವು ಈ ಹಿಂದೆ ಗೆದ್ದ 58 ಸ್ಥಾನಗಳನ್ನು ಮೀರಿ ಗೆಲ್ಲಬೇಕಾಗಿದ್ದು, ಅದಕ್ಕಾಗಿ ನಾವೆಲ್ಲರೂ ಬಲಿಷ್ಠವಾಗಿ ಪಕ್ಷ ಕಟ್ಟೋಣ. ಮತ್ತೊಮ್ಮೆ ಕುಮಾರಣ್ಣನವರನ್ನು ಮುಖ್ಯಮಂತ್ರಿಗಳಾಗಿ ಆಯ್ಕೆ ಮಾಡೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬುರವರು, ಕೋರ ಕಮೀಟಿ ಅಧ್ಯಕ್ಷ ಕೃಷ್ಣಾರೆಡ್ಡಿ ರವರು, ಸಂಸದರಾದ ಮಲ್ಲೇಶ್ ಬಾಬುರವರು, ವಿವಿಧ ರಾಜ್ಯಗಳ ಪ್ರತಿನಿಧಿಗಳು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಆಹ್ವಾನಿತ ನಾಯಕರು, ಸಾವಿರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

# ಸರಕಾರಿ ಮಹಾವಿದ್ಯಾಲಯ ಸಿಂಧನೂರು ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರದಲ್ಲಿ ರಸಪ್ರಶ್ನೆ ಸ್ಪರ್ಧೆ

❑ ನೈಜ್ಯ ದೆಸೆ ನ್ಯೂಸ್

**ಸರಕಾರಿ ಮಹಾವಿದ್ಯಾಲಯ ಸಿಂಧನೂರು ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದ ಉದ್ಘಾಟನೆಯನ್ನು ಗಿಡಕ್ಕೆ ನೀರು ಹಾಕುವುದರ ಮೂಲಕ ಉದ್ಘಾಟಕರಾದ ಶ್ರೀ ಪ್ರೋ. ಪಾಂಡು,**

ಪ್ರಾಚಾರ್ಯರು ಇವರು ಉದ್ಘಾಟಿಸಿದರು ನಂತರ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮ ಜರಗಿತು ಈ ಕಾರ್ಯಕ್ರಮದಲ್ಲಿ ಅದ್ಯಕ್ಷತೆಯನ್ನು ಶ್ರೀಮತಿ ಡಾ. ಲಕ್ಷ್ಮೀದೇವಿ, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಸ.ಮ.ಸಿಂ




ಇವರು ವಹಿಸಿದ್ದರು ಹಾಗೂ ಕಾರ್ಯಕ್ರಮದಲ್ಲಿ : ಡಾ. ಜಾಜಿ ದೇವೆಂದ್ರಪ್ಪ, ಮುಖ್ಯಸ್ಥರು ಕನ್ನಡ ಅಧ್ಯಯನ ವಿಭಾಗ ಸ.ಮ.ಸಿಂ, ಡಾ. ವೈಜನಾಥ ಸಗರಮಠ, ಐಕ್ಯೂಎಸಿ ಸಂಚಾಲಕರು ಸ.ಮ.ಸಿಂ, ಡಾ. ಪುಷ್ಪಾ, ಮುಖ್ಯಸ್ಥರು ರಸಾಯನ ಶಾಸ್ತ್ರ ವಿಭಾಗ ಸ.ಮ.ಸಿಂ., ಡಾ. ನಾಗೇಶ, ಅರ್ಥ-ಶಾಸ್ತ್ರ ಉಪನ್ಯಾಸಕರು ಸ.ಮ.ಸಿಂ., ಡಾ. ತಿರುಪತಿ ವಡ್ಡಿ, ಅರ್ಥಶಾಸ್ತ್ರ ಉಪನ್ಯಾಸಕರು ಸ.ಮ.ಸಿಂ., ಶ್ರೀ ವಿಶ್ವನಾಥ ಪಾಟೀಲ್ ಅರ್ಥ-ಶಾಸ್ತ್ರ ಉಪನ್ಯಾಸಕರು ಸ.ಮ.ಸಿಂ., ಕು. ಮಂಜುಳಾ ಎನ್, ಅರ್ಥಶಾಸ್ತ್ರ ಉಪನ್ಯಾಸಕರು ಸ.ಮ.ಸಿಂ., ಉಪನ್ಯಾಸಕರು ಸ.ಮ.ಸಿಂ.: ಶ್ರೀ ಹನುಮಪ್ಪ ಉಳಿಮೇಶ್ವರ, ಅರ್ಥಶಾಸ್ತ್ರ ಮುಖ್ಯಸ್ಥರು, ಸಿಬ್ಬಂದಿವರ್ಗ, ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿ/ನಿಯರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆ ಬೆಳಗಾವಿ ಅಧಿವೇಶನದಲ್ಲಿ ಚರ್ಚಿತ ವಿಷಯವಾಗಿಸಿ ಕ್ರಮ ಕೈಗೊಳ್ಳುವ ಕುರಿತು ಮನವಿ



❑ ನೈಜ್ಯ ದೆಸೆ ನ್ಯೂಸ್

ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕದ ರಾಜ್ಯ ನಿಯೋಗವು ಸಭಾಧ್ಯಕ್ಷರಾದ ಸನ್ಮಾನ್ಯ ಯು.ಟಿ.



ಖಾದರ್ ರವರನ್ನು ಭೇಟಿಯಾಗಿ, ರಾಜ್ಯದಲ್ಲಿ ದಿನೇದಿನೇ ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಆನ್‌ಲೈನ್ ಮೋಸಗಳ ಗಂಭೀರತೆ ಅವರ ಗಮನಕ್ಕೆ ತರಲಾಯಿತು. ಡಿಸೆಂಬರ್ 8 ರಿಂದ ಆರಂಭವಾಗಲಿರುವ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಈ ವಿಷಯವನ್ನು ಚರ್ಚಿತ ಮತ್ತು ತುರ್ತಾಗಿ ಕ್ರಮ ಕೈಗೊಳ್ಳಬೇಕಾದ ಸಾರ್ವಜನಿಕ ಹಿತಾಸಕ್ತಿಯ ವಿಷಯವಾಗಿ ಪರಿಗಣಿಸುವಂತೆ ಮನವಿ ಸಲ್ಲಿಸಲಾಯಿತು "ಮತ್ತು ವಿಧಾನ ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್ ರವರಿಗೆ ವಿಧಾನಪ-ರಿಷತ್ ನಲ್ಲಿ ಚರ್ಚಿಸಿ, ರಾಜ್ಯದಲ್ಲಿ ಹೆಚ್ಚುತ್ತಿರುವ ಸೈಬರ್ ವಂಚನೆಗೆ ಕಠಿಣ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಮನವಿ ಮಾಡಲಾಯಿತು ಈ ಸಂದರ್ಭದಲ್ಲಿ ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕದ ರಾಜ್ಯಾಧ್ಯಕ್ಷರು ಡಾ. ನಸೀಮ್ ಅಹ್ಮದ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಇಸ್ಮಾಯಿಲ್ ಉಪಸ್ಥಿತರಿದ್ದರು.

# ರೈತರಿಂದ ಹಣ ವಸೂಲಿ ಆರೋಪ: ಗ್ರಾಮ ಲೆಕ್ಕಾಧಿಕಾರಿ ವಿರುದ್ಧ ಕ್ರಮಕ್ಕೆ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರೈತರಿಂದ ಹಣ ವಸೂಲಿ ಮಾಡಿ ವಂಚಿಸಿದ ಗ್ರಾಮ ಲೆಕ್ಕಾಧಿಕಾರಿ ರವಿ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಸೇವೆಯಿಂದ ವಜಾ ಮಾಡಬೇಕು. ವಂಚನೆಗೆ ಒಳಗಾದ ರೈತರಿಗೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ಉಪ ತಹಶೀಲ್ದಾರ್ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.**

ಇದೇ ವೇಳೆ ಸಂಘದ ಅಧ್ಯಕ್ಷ ಹನುಮಂತ ಮಡಿವಾಳ ಮಾತನಾಡಿ,'ಗ್ರಾಮ ಲೆಕ್ಕಾಧಿಕಾರಿ ರವಿ ಜಾಲಹಳ್ಳಿ ಹೋಬಳಿ ವ್ಯಾಪ್ತಿಯ ಮುಕ್ಕನಾಳ, ಗಾಜಲದಿನ್ನಿ, ಕರಡಿಗುಡ್ಡ, ಅಮರಪುರ ಗ್ರಾಮಗಳ ರೈತರನ್ನು



ನಂಬಿಸಿ ಪ್ರಕೃತಿ ವಿಕೋಪದಡಿ ಬೆಳೆ ಪರಿಹಾರ, ಮನೆ ಹಾಳಾಗಿರುವ ವರದಿ ಸಲ್ಲಿಸಿ ಬ್ಯಾಂಕ್ ಖಾತೆಗೆ 50 ಸಾವಿರದಿಂದ 60 ಸಾವಿರ ಪರಿಹಾರ ಜಮಾ ಮಾಡಿಸುವುದಾಗಿ ಹಣ ವಸೂಲಿ ಮಾಡಿದ್ದಾರೆ' ಎಂದು ದೂರಿದರು.

'ರೈತರು ತಮ್ಮ ಖಾತೆಗೆ ಇನ್ನೂ ಹಣ ಯಾಕೆ ಜಮಾ ಅಗಿಲ್ಲ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರೆ ಹಾರಿಕೆಯ ಉತ್ತರ ನೀಡುತ್ತಾ ಕಾಲಹರಣ ಮಾಡಿದ್ದಾರೆ. ರೈತರು ಇದನ್ನು ಕಂದಾಯ ಇಲಾಖೆಯ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದರೂ ಯಾವುದೇ ಕ್ರಮಕ್ಕೆ ಮುಂದಾಗದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ತಕ್ಷಣವೇ ಜಿಲ್ಲಾಧಿಕಾರಿ ರವಿ ಅವರನ್ನು ವಜಾಗೊಳಿಸಬೇಕು' ಎಂದು ಮನವಿ ಮಾಡಿದರು. ಉಪ ತಹಶೀಲ್ದಾರ್ ಗೋವಿಂದ ನಾಯಕ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ರಂಗನಾಥ ಬುಂಕಲದೊಡ್ಡಿ, ಹನುಮಂತಪ್ಪ ಮಂಡಲಗುಡ್ಡ, ಮಕ್ತೂಮ್ ಬಾಷಾ, ಶಿವಪ್ಪ, ರಿಯಾಜ್ ಆರ್ತಿ, ಶಿವಮಾನ್ಯಪ್ಪ ತ್ಯಾಪ್ಲಿ ಸೇರಿದಂತೆ ಇತರರು ಹಾಜರಿದ್ದರು.

# ವಿವಿಧ ಹದಿನೈದು ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ನ.26 ರಂದು ಬೃಹತ್ ಬೆಂಗಳೂರು ಚಲೋ

❑ ನೈಜ್ಯ ದೆಸೆ ನ್ಯೂಸ್

**ಸಂಯುಕ್ತ ಹೋರಾಟ ಕರ್ನಾಟಕ ವತಿಯಿಂದ ನ.26 ರಂದು ಕಾರ್ಮಿಕರ ವಿವಿಧ 15 ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ರಾಜ್ಯವ್ಯಾಪಿ ಬೃಹತ್ ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆ ಮುಖಂಡರು ಹಾಗೂ ಕೃಷಿ ಬೆಲೆ ಆಯೋಗದ ಸದಸ್ಯರಾದ ಡಿ.ಎಚ್.ಪೂಜಾರ ತಿಳಿಸಿದರು.**

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಚುನಾವಣೆಯಲ್ಲಿ ಕೊಟ್ಟಂತಹ ಭರವಸೆಗಳ ಬಗ್ಗೆ ನ.26 ಸಂವಿಧಾನ ದಿನದಂದು ಸಂಬಂಧಪಟ್ಟ ಸಚಿವರು ಸ್ಪಷ್ಟ ನಿರ್ಧಾರ ಕೊಡಬೇಕು. ರೈತರ, ಕಾರ್ಮಿಕರ, ಮಹಿಳೆಯರ, ದುಡಿಯುವ




ವರ್ಗದ ವಿರೋಧಿ ಪಕ್ಷವಾದ ಬಿಜೆಪಿ ಪಕ್ಷವನ್ನು ಜನ ತಿರಸ್ಕರಿಸಿ, ಜನ ಕಾಂಗ್ರೆಸ್ಸಿಗೆ ಅಧಿಕಾರ ಕೊಟ್ಟಿದ್ದಾರೆ. ಅಧಿಕಾರ ಅನುಭವಸುತ್ತಿರುವ ಕಾಂಗ್ರೆಸ್ ಪಕ್ಷ ಏನು ಮಾಡುತ್ತಿದೆ ಎಂದು ಪ್ರಶ್ನಿಸಿದರು.

ಬಗರ್ ಹುಕುಂ ವಿಷಯವಾಗಿ ರೈತರಿಗೆ ಒನ್ ಟೈಮ್ ಸೆಟಲಮೆಂಟ್ ಭೂಮಿ ಮಂಜೂರು ಮಾಡಬೇಕು. ಬೆಂಬಲ ಬೆಲೆ ಘೋಷಣೆ ಮಾಡಬೇಕು. ಮೈಕ್ರೋ ಫೈನಾನ್ಸ್‌ಗಳಿಂದ ಸಾಲ ಕಿರಿಕಿರಿಕೊಡದಂತೆ ಆದೇಶ ಮಾಡಬೇಕು. ವಿದ್ಯುತ್ ಖಾಸಗೀಕರಣ ಆಗಬಾರದು, ಕಾರ್ಮಿಕರಿಗೆ 8 ಗಂಟೆ ಕೆಲಸ ಮಾಡಿಸಬೇಕು. ಮತ್ತು ಹೆಚ್ಚುವರಿ ಕೆಲಸಕ್ಕೆ ದುಪ್ಪಟ್ಟು ಹಣ ಕೊಡಬೇಕು. ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ಅನೇಕ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಬಿ.ಎನ್.ಯರದಿಹಾಳ, ಚಿಟ್ಟಿಬಾಬು, ರಮೇಶ್ ಪಾಟೀಲ್ ಬೇರ್ಗಿ, ಬಸಲಿಂಗಪ್ಪ, ಅಪ್ಪಣ್ಣ ಜಾಲಿಹಾಳ, ಎಚ್.ವಿರುಪಾಕ್ಷಗೌಡ, ಚಂದ್ರಶೇಖರ್ ಕ್ಯಾತ್ನಟ್ಟಿ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಯಿಂದ ಸ್ವಾಭಿಮಾನಿ ಕನ್ನಡಿಗನ ಹಬ್ಬ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಎ.ಪಿ.ಎಂ.ಸಿ. ಬಯಲು ಸಭಾಂಗಣದಲ್ಲಿ ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಮತ್ತು ತಾಲೂಕು ಘಟಕದ ವತಿಯಿಂದ ನಡೆದ ಸ್ವಾಭಿಮಾನಿ ಕನ್ನಡಿಗನ ಹಬ್ಬ ಕಾರ್ಯಕ್ರಮವನ್ನು ಚಿಕಲಪರ್ವಿಯ ಶ್ರೀ ಸದಾಶಿವ ಮಹಾಸ್ವಾಮಿಗಳು ಉದ್ಘಾಟಿಸಿ ಆರ್ಶೀವಾಚನ ನೀಡಿ ವಿಶ್ವದ ಅತ್ಯಂತ ಪ್ರಾಚೀನ ಭಾಷೆಗಳಲ್ಲಿ ಕನ್ನಡ ಭಾಷೆ ಕೂಡ ಒಂದು ಇಂತಹ ಸಮೃದ್ದ ಭಾಷ ಪರಂಪರೆಯನ್ನು ನಾವೇಲ್ಲರು ಕೂಡ ಉಳಿಸಿಕೊಂಡು ಹೋಗುವ ಜವಾಬ್ದಾರಿ ಪ್ರತಿಯೋಬ್ಬರ ಮೇಲಿದೆ ರಾಜ್ಯದಾದ್ಯಂತ ನವಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದರೆ ಬೆಳಗಾವಿಯಲ್ಲಿ ಕರಾಳದಿನವಾಗಿ ಆಚರಿಸಲಾಗುತ್ತದೆ ಇದ್ದಕ್ಕೆ ನಮ್ಮ ಸರ್ಕಾರ ಗಡಿ ಭಾಗದ ಕನ್ನಡಿಗರಿಗೆ ಹೆಚ್ಚಿನ ಅದ್ಯತೆ ಸೌಲಭ್ಯ ಕಲ್ಪಿಸದೆ ಇರುವುದೆ ಕಾರಣವಾಗಿದೆ ನಮ್ಮ ಜಿಲ್ಲೆ ಆಂಧ್ರ ಗಡಿಯನ್ನು ಹಂಚಿಕೊಂಡಿದ್ದರು.**




ಕೂಡ ಕನ್ನಡ ಭಾಷಿಕರ ಸಂಖ್ಯೆ ಹೆಚ್ಚಾಗಿದೆ ಅದ್ದರಿಂದ ಸರ್ಕಾರ ಹಾಗೂ ಕನ್ನಡ ಪರ ಸಂಘಟನೆಗಳು ಗಡಿ ಭಾಗದಲ್ಲಿ ಹೆಚ್ಚು ಹೆಚ್ಚು ಇಂತಹ ಕನ್ನಡ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಮಾತ್ರ ಗಡಿ ಸಮಸ್ಯೆ ಬರುವುದಿಲ್ಲ ಎರಡು ರಾಜ್ಯಗಳ ನಡುವೆ ಸೌಹಾರ್ದತೆ ಉಳಿಯುತ್ತದೆ ಎಂದು ತಿಳಿಸಿದರು. ವಿಜಯ ಕರ್ನಾಟಕ ರಕ್ಷಣಾ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಎಂ.ಬಿ.ಮಹೇಶಕುಮಾರ ಮಾತನಾಡಿ ನಮ್ಮ ಸಂಘಟನೆ ರಾಜ್ಯದಲ್ಲಿ ಗ್ರಾಮ ಮಟ್ಟದಿಂದ ರಾಜ್ಯ ಮಟ್ಟದವರೆಗೂ ಕನ್ನಡಿಗರನ್ನು ಸಂಘಟಿಸಿ ನಾಡು, ನುಡಿ, ಭಾಷೆಯ ಉಳಿವಿಗಾಗಿ ಹೋರಾಟ ನಡೆಸಲಾಗುವುದು. ರಾಜ್ಯದಲ್ಲಿ ಕನ್ನಡಿಗರಿಗೆ ಮೊದಲ



ಅದ್ಯತೆ ದೊರೆಯಬೇಕು, ಖಾಸಗಿ ಹಾಗೂ ಸರಕಾರಿ ಉದ್ಯೋಗದಲ್ಲಿ ಕನ್ನಡಿಗರಿಗೆ ಹೆಚ್ಚಿನ ಅದ್ಯತೆ ದೊರೆಯಬೇಕು ಪರ ರಾಜ್ಯಗಳಿಂದ ಬಂದವರು ಇಂದು ರಾಜ್ಯದಲ್ಲಿ ಹೆಚ್ಚಿನ ಅಧಿಪತ್ಯ ನಡೆಸುವುದಕ್ಕೆ ನಮ್ಮ ಸಂಘಟನೆ ಅವಕಾಶ ನೀಡುವುದಿಲ್ಲ ನಿತ್ಯ ಕನ್ನಡಕ್ಕಾಗಿ ನಮ್ಮ ಸಂಘಟನೆ ಶ್ರಮಿಸುತ್ತದೆ ಎಂದು ತಿಳಿಸಿದರು. ಶಿಕ್ಷಣ ಕ್ಷೇತ್ರದ ಸಾಧನೆಗಾಗಿ ಜೀಶನ್ ಸಿದ್ದಿಕಿ, ಜೀವನ ಕೌಶಲ್ಯ ಸಂಪನ್ಮೂಲ ವ್ಯಕ್ತಿಗಳಾದ ಗಿರಿಧರ ಪೂಜಾರಿ, ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದರಾದ ಡಿಂಗ್ರಿ ನರೇಶ, ಹನುಮಂತ ಭಜಂತ್ರಿ, ಶಾಮಣ್ಣ ಖಾನಪೂರ ರವರನ್ನು ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಪಟ್ಟಣದ ಬಸವವೃತ್ತದಿಂದ ಎ.ಪಿ.ಎಂ.ಸಿ. ಬಯಲು ಸಭಾಂಗಣದವರೆಗೆ ನಾಡದೇವಿ ಭುವನೇಶ್ವರಿ ಮಾತೆಯ ಭಾವಚಿತ್ರ ಭವ್ಯ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ನಡೆಯಿತು. ಕಾರ್ಯಕ್ರಮದಲ್ಲಿ ತಾ. ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹಾರ ಪಾಟೀಲ್, ಮುಖಂಡರಾದ ಶರಣಪ್ಪಗೌಡ ನಕ್ಕುಂದಿ, ವಿಜಯ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಮಹಿಳಾ ಘಟಕದ ಅಧ್ಯಕ್ಷರಾದ ಹೇಮಾ ರಾಜೇಂದ್ರ, ರಾಜ್ಯ ಸಂ, ಕಾರ್ಯದರ್ಶಿ ಡಿ.ವಿ.ಸುಬ್ರಮಣ್ಯ ,ಜಿಲ್ಲಾಧ್ಯಕ್ಷರಾದ ಅಂಬಾಜಿ ರಾವ್, ಕಾರ್ಯಧ್ಯಕ್ಷರಾದ ಆನಂದಸ್ವಾಮಿ, ತಾ.ಅಧ್ಯಕ್ಷ ಭೀಮಣ್ಣ ಮುದಗಲ್,ಉಪಾಧ್ಯಕ್ಷರಾದ ಶೇಖರಗೌಡ, ಪ್ರ.ಕಾರ್ಯದರ್ಶಿ ಗಿರಿನಾಯಕ, ವೀರಭದ್ರಯ್ಯಸ್ವಾಮಿ, ಮನೋಹರ್ ಆಚಾರ್ಯ,ನಾಗರಾಜ ನಾಯಕ, ರಮೇಶನಾಯಕ, ಅಮರೇಶಗೌಡ ಸೇರಿದಂತೆ ಇನ್ನಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101